20 October 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಹಿರಿಯರು ಹೇಳುವ ಮಾತು ಅನುಭವದಿಂದ, ಕಿರಿಯರು ಹೇಳುವ ಮಾತು ಪುಸ್ತಕದ ಪುಟದಿಂದ !

ಸ್ನೇಹಾ ಆನಂದ್

ಶುಭಾಶಯಗಳು

ವರ್ತಮಾನ ಪ್ರಾದೇಶಿಕ ದಿನಪತ್ರಿಕೆಯ ಸಮಸ್ತ ಓದುಗರಿಗೆ, ಜಾಹೀರಾತುದಾರರಿಗೆ ಆಯುಧ ಪೂಜೆ ಹಾಗೂ ವಿಜಯದಶಮಿಯ ಶುಭಾಶಯಗಳು.

ಬಿಡುವು

ಆಯುಧ ಪೂಜೆಯ ನಿಮಿತ್ತ ಮಂಗಳವಾರ ಕಚೇರಿಗೆ ರಜೆ ಇರುವುದರಿಂದ ಬುಧವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 300 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್
ಮಾನ್ಯ ಸಂಸದರು (ಲೋಕಸಭೆ)
ಹಾಗೂ ಮೈಸೂರು ರಾಜ ಮನೆತನದ ಪ್ರತಿನಿಧಿ

ವಿಶೇಷ ಆತಿಥಿಗಳು

ಶ್ರೀ ವಿ. ಡಿ. ಸತೀಶನ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕೇರಳಂ ಸರ್ಕಾರ



ಶ್ರೀ ಎ. ರೇವಂತ್ ರೆಡ್ಡಿ
ಸನ್ಮಾನ್ಯ ಮುಖ್ಯಮಂತ್ರಿಗಳು
ತೆಲಂಗಾಣ ಸರ್ಕಾರ

ನಾಡಿನ ಸಮಸ್ತ ಜನತೆಗೆ

ಆಯುಧ ಪೂಜೆ ಹಾಗೂ ವಿಜಯದಶಮಿಯ ಶುಭಾಶಯಗಳು

ಕರ್ನಾಟಕದ ಸಂಸ್ಕೃತಿ, ಪರಂಪರೆಯ ಮೆರವಣಿಗೆ

ದಿನಾಂಕ:
ಅಕ್ಟೋಬರ್ 21
ಬುಧವಾರ

ಸಮಯ:
ಸಂಜೆ 4:00
ಗಂಟೆಯಿಂದ

ಐತಿಹಾಸಿಕ ಜಂಬೂಸವಾರಿ

ಮೈಸೂರಿನಲ್ಲಿ ನಾಡದೇವಿ ಶ್ರೀ ಚಾಮುಂಡೇಶ್ವರಿಯ ಅಂಬಾರಿ ಮೆರವಣಿಗೆ ನೋಡಬನ್ನಿ, ಕರ್ನಾಟಕದ ವೈಭವ ಕಣ್ತುಂಬಿಕೊಳ್ಳಿ

ಕ್ಷೇತ್ರಗಳ ಮೀಸಲಿಡುವಂತೆ ಕಾರ್ಯದರ್ಶಿಗೆ ಮನವಿ

ಚಾಮರಾಜನಗರ : ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 6 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ನಿಗದಿಪಡಿಸಿರುವ ಮೀಸಲಾತಿ ಪಟ್ಟಿಯಲ್ಲಿ ಅನುಸೂಚಿತ ಜಾತಿಗೆ ಅನ್ಯಾಯವಾಗಿರುವುದನ್ನು ಸರಿಪಡಿಸುವಂತೆ ಒತ್ತಾಯಿಸಿ ಡಾ.ಬಿ.ಆರ್.ಅಂಬೇಡ್ಕರ್ ಅನುಯಾಯಿ ಬಳಗದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಪ್ರಿಯದರ್ಶಿನಿ ಅವರ ಮುಖಾಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಕಾರ್ಯದರ್ಶಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 6 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳನ್ನು ಒಳಗೊಂಡಿದ್ದು, ಈ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯ ಮತದಾರರು 48 ಸಾವಿರಕ್ಕೂ ಹೆಚ್ಚು ಜನರು ಗ್ರಾಮೀಣ ಪ್ರದೇಶದವರೇ ಆಗಿದ್ದು ಈ ನಡೆದಿರುವ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ 2 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು ಅಂದರೆ ಚಂದಕವಾಡಿ ಅನುಸೂಚಿತ ಜಾತಿ (ಪರಿಶಿಷ್ಟ ಜಾತಿ) ಮೀಸಲು ಕ್ಷೇತ್ರ ಆಗಿದ್ದು, ಅದೇ ರೀತಿ ಉಡಿಗಾಲ ಜಿಲ್ಲಾ ಪಂಚಾಯಿತಿ ಕ್ಷೇತ್ರವು ಅನುಸೂಚಿತ ಜಾತಿ (ಮಹಿಳಾ ಮೀಸಲು) ಮೀಸಲು ಕ್ಷೇತ್ರವಾಗಿತ್ತು. ಆದರೆ ಈ ಬಾರಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವ ಯಾವುದೇ ಕ್ಷೇತ್ರವನ್ನು ಪರಿಶಿಷ್ಟ ಜಾತಿಗೆ ಕ್ಷೇತ್ರ ನೀಡದೇ, ಬಹುಸಂಖ್ಯಾತರಾದ ಪರಿಶಿಷ್ಟರ ಜಾತಿಗೆ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಈ ಕೂಡಲೇ ಸರಿಪಡಿಸಿ, ಆಲೂರು ಅಥವಾ ಮಾದಾಪುರ ಜಿಲ್ಲಾ ಪಂಚಾಯಿತಿಯನ್ನು ಅನುಸೂಚಿತ ಜಾತಿ (ಪರಿಶಿಷ್ಟ ಜಾತಿ) ಗೆ ಮೀಸಲಿಡಬೇಕೆಂದು ಡಾ. ಬಿ.ಆರ್. ಅಂಬೇಡ್ಕರ್ ಅನುಯಾಯಿ ಬಳಗದ ವತಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅನುಯಾಯಿ ಬಳಗದ ಜಿಲ್ಲಾಧ್ಯಕ್ಷ ಎಸ್.ಪಿ.ಮಹೇಶ್, ಜಿಲ್ಲಾ ಸಂಚಾಲಕರಾದ ವಾಸುಹೊಂಡರಬಾಳು, ಸಿದ್ದರಾಜು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ರಂಗಸ್ವಾಮಿ ಗಾಳೀಪುರ,ಛಲವಾದಿ ಮಹಾಸಭಾದ ಮಾಜಿ ಜಿಲ್ಲಾಧ್ಯಕ್ಷ ರಮೇಶ್, ದೇವಾಲಪುರ ಶಿವಣ್ಣ, ಹೊಂಡರಬಾಳು ರಾಜೇಂದ್ರ ಹಾಜರಿದ್ದರು.

ಬೇಟೆಗಿಳಿದು ಬೋನಿಗೆ ಬಿದ್ದ ಹುಲಿ



ಚಾಮರಾಜನಗರ: ಹಾಡಹಗಲೇ ಕರುವನ್ನು ಬೇಟೆಯಾಡಲು ಬಂದ ಹುಲಿಯೊಂದು ಬೋನಿಗೆ ಬಿದ್ದ ಘಟನೆ ಗುಂಡ್ಲುಪೇಟೆಯ ಬೊಮ್ಮಲಾಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಅರ್ಜುನ್ ಎಂಬುವರ ಜಮೀನಿನಲ್ಲಿ ಹೆಣ್ಣು ಹುಲಿ ಸೆರೆಯಾಗಿದ್ದು, ಇದರ ವಯಸ್ಸು 4-5 ವರ್ಷ ಎಂದು ಅಂದಾಜಿಸಲಾಗಿದೆ. ಕಳೆದ ವಾರ ಇದೇ ಜಮೀನಿನಲ್ಲಿ ಹಸುವಿನ ಮೇಲೆ ದಾಳಿ ಮಾಡಿ ತೀವ್ರವಾಗಿ ಗಾಯಗೊಳಿಸಿತ್ತು. ಅದಾದ ಬಳಿಕ, ಹುಲಿ ಸೆರೆಗೆ ಬೋನ್? ಇಡಲಾಗಿತ್ತು. ಅರಣ್ಯ ಇಲಾಖೆಯ ಸಿಬ್ಬಂದಿ ತುಮಕೂರು ಮಾದರಿ ಬೋನಿಟ್ಟು ಕರುವನ್ನು ಕಟ್ಟಿ ಹಾಕಿದ್ದರು. ಕರು ತಿನ್ನಲು ಬಂದ ಹುಲಿ ಸೆರೆಯಾಗಿದ್ದು ರೈತರು ನಿರಾಳರಾಗಿದ್ದಾರೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ಲು ಪೇಟೆ ಬಫರ್ ವಲಯ ಅರಣ್ಯಾಧಿಕಾರಿ ಶಿವಕುಮಾರ್ ನೇತೃತ್ವದಲ್ಲಿ ಸಿಬ್ಬಂದಿ ಹುಲಿ ಸೆರೆಗೆ ಕಾರ್ಯಾಚರಣೆ ನಡೆಸುತ್ತಿದ್ದರು. ಇನ್ನು, ಪಶು ವೈದ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿಕೊಟ್ಟು ಹುಲಿಯ ಆರೋಗ್ಯವನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅ.22ರಂದು ಸಂಗೀತ ನೃತ್ಯವೈಭವ

ರಾಮನಗರ: ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ರಾಮನಗರದ ನ್ಯೂ ಎಕ್ಸ್ ಫರ್ಟ್ ಕಾಲೇಜು ಸಹಯೋಗದಲ್ಲಿ ಕಾಲೇಜಿನ ಸಭಾಂಗಣದಲ್ಲಿ 22ನೇ ಅಕ್ಟೋಬರ್ 2026ರಂದು ಬೆಳಗ್ಗೆ 10.30ಕ್ಕೆ ಸಂಗೀತ ನೃತ್ಯವೈಭವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪರಿಸರ ಪ್ರೇಮಿ ಸಾಲುಮರದ ನಿಂಗಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷೆ ಶುಭ ಧನಂಜಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೆ. ಸತೀಶ್, ನ್ಯೂ ಎಕ್ಸ್ ಫರ್ಟ್ ಕಾಲೇಜು ಪ್ರಾಂಶುಪಾಲ ಡಾ. ಡಿ.ಆರ್. ರವಿಕುಮಾರ್, ಪ್ರಗತಿಪರ ರೈತ ಮಹಿಳೆ ಶಾಂತಮ್ಮ ವೈ.ಸಿ. ಅತಿಥಿಗಳಾಗಿ ಪಾಲ್ಗೊಳ್ಳುವರು. ಸಂಸ್ಕೃತಿ ಚಿಂತಕ, ಸಾಹಿತಿ ಡಾ. ಎಂ. ಬೈರೇಗೌಡ ಉಪನ್ಯಾಸ ನೀಡುವರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯ ಸಂಚಾಲಕಿ ಉ?ಾ ಬಸಪ್ಪ ಉಪಸ್ಥಿತರಿರುವರು. ಕಾರ್ಯಕ್ರಮದ ಅಂಗವಾಗಿ ಚನ್ನಪಟ್ಟಣದ ರಾಮಚಂದ್ರ ಮತ್ತು ತಂಡದ ಸುಗಮ ಸಂಗೀತ, ರಾಮನಗರದ ಮಂಜುಳ ರವಿಕುಮಾರ್ ತಂಡದ ಸಮೂಹ ನೃತ್ಯ, ಮಾಗಡಿಯ ಶಾಂತಲ ಬಿ.ಎಚ್. ತಂಡದ ಶಾಸ್ತ್ರೀಯ ನೃತ್ಯ, ಕಾರ್ಯಕ್ರಮ ನಡೆಸಿಕೊಡುವರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ, ಸಂಬಂಧಪಟ್ಟ ಸಂಸ್ಥೆಗಳಿಗೆ ಮತ್ತು ಎಲ್ಲರಿಗೂ ಈ ಮೂಲಕ ತಿಳಿಸುವುದೇನೆಂದರೆ: ಎಮ್/ಎಸ್.ಶ್ರೀನಿವಾಸ ಕನ್ಸ್ಟ್ರಕ್ಷನ್ಸ್, ಮೈಸೂರು, ಇದು ಪಾಲುದಾರಿಕೆ ಸಂಸ್ಥೆಯಾಗಿದ್ದು ಸಂಸ್ಥೆಗಳ ರಿಜಿಸ್ಟ್ರಾರ್‌ನಲ್ಲಿ ನೋಂದಾಯಿಸಲಾಗಿರುವ ನೋಂದಣಿ ಸಂಖ್ಯೆ.21/89-90, ಈ ಸಂಸ್ಥೆಯ ಪಾಲುದಾರರಾದ ಶ್ರೀ.ಹರೀಶ್ ಎನ್ ಅವರು ದಿನಾಂಕ 26.11.2021 ರಿಂದ ಜಾರಿಗೆ ಬರುವಂತೆ ಅವರು ತಮ್ಮ ಪಾಲುದಾರಿಕೆಯಿಂದ ಸ್ವಯಂ ನಿವೃತ್ತಿ ಹೊಂದಿರುತ್ತಾರೆ. ಈ ಪಾಲುದಾರಿಕೆ ಸಂಸ್ಥೆಯನ್ನು ದಿನಾಂಕ 14.09.2026 ರಂದು ಮರುಸಂಘಟನೆ ಮಾಡಲಾಗಿದೆ.

ಮುಂದಿನ ವ್ಯಾಪಾರವನ್ನು ಮುಂದುವರಿಸುತ್ತಿರುವ ಉಳಿದ ಪಾಲುದಾರರು ಶ್ರೀ.ನಿಖಿಲ್ ಜಿ, ಶ್ರೀ ನಿತಿನ್ ಜಿ ಮತ್ತು ಶ್ರೀಮತಿ ಶ್ವೇತಾ ರಾಜೇಶ್ ಇವರು ಮಾತ್ರ ಸಂಸ್ಥೆಯ ವ್ಯವಹಾರವನ್ನು ಮುಂದುವರಿಸುತ್ತಾರೆ. ಆದ್ದರಿಂದ ಸಾರ್ವಜನಿಕರು ಅಥವಾ ಯಾವುದೇ ವ್ಯಕ್ತಿಗಳು ನಿವೃತ್ತರಾದ ಪಾಲುದಾರರಾದ ಶ್ರೀ ಹರೀಶ್ ಎನ್ ಅವರೊಂದಿಗೆ ಸಂಸ್ಥೆಯ ಹೆಸರಿನಲ್ಲಿ ಯಾವುದೇ ವ್ಯವಹಾರ ನಡೆಸಬಾರದು. ಇನ್ನು ಮುಂದೆ ಸಂಸ್ಥೆಯ ಪರವಾಗಿ ಮುಂದುವರಿಯುವ ಪಾಲುದಾರರು ಮಾತ್ರ ಜವಾಬ್ದಾರರಾಗಿರುತ್ತಾರೆ.

ಸಹಿ/- ಶ್ರೀ.ನಿಖಿಲ್ ಜಿ- ವ್ಯವಸ್ಥಾಪಕ ಪಾಲುದಾರರು
ಶ್ರೀನಿವಾಸ ಕನ್ಸ್ಟ್ರಕ್ಷನ್ಸ್ (ರಿ)
ಬಿಲ್ಡರ್ಸ್, ಪ್ರಮೋಟರ್ಸ್, ಡೆವೆಲಪರ್ಸ್,
ಸಿದ್ಧಾರ್ಥ ನಗರ, ಮೈಸೂರು-570011

ದಿನಾಂಕ: 19.10.2026
ಸ್ಥಳ : ಮೈಸೂರು

ವಿಶ್ವ ಕಾರ್ಮಿಕರ ಒಕ್ಕೂಟ ಘಟಕ ಅಸ್ತಿತ್ವಕ್ಕೆ

ಸರ್ಕಾರದ ಸವಲತ್ತುಗಳನ್ನು ಎಲ್ಲ ಕಾರ್ಮಿಕರಿಗೆ ತಲುಪಿಸುವುದು ಪ್ರಥಮ ಆದ್ಯತೆ

ರಾಮನಗರ: ಸರ್ಕಾರದ ಸವಲತ್ತುಗಳನ್ನು ಎಲ್ಲ ಕಾರ್ಮಿಕರಿಗೂ ತಲುಪಿಸಬೇಕು ಎಂಬುದು ವಿಶ್ವ ಕಾರ್ಮಿಕರ ಒಕ್ಕೂಟದ ಪ್ರಮುಖ ಉದ್ದೇಶ ಎಂದು ಒಕ್ಕೂಟದ ರಾಜ್ಯಾಧ್ಯಕ್ಷ ರಾಜೇಂದ್ರ ಗೌಡ ಹೇಳಿದರು.

ಒಕ್ಕೂಟದ ಜಿಲ್ಲಾ ಘಟಕದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಬಳಿಕ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಗಿರಿಯಪ್ಪ ಹಾಗೂ ಇತರ ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಿಸಿ ಅವರು ಮಾತನಾಡಿದರು. ರಾಜ್ಯಾದ್ಯಂತ ಸಂಘಟನೆಯ ಜಾಲವನ್ನು ವಿಸ್ತರಿಸಲಾಗುತ್ತಿದೆ. ಕಾರ್ಮಿಕರ ಭವಿಷ್ಯ ಮತ್ತು ಕಲ್ಯಾಣ ಕ್ಕಾಗಿ ದುಡಿಯುವ ಉತ್ಸಾಹ ಹೊಂದಿರುವ ಹಲ ವರು ಸಂಘಟನೆಗೆ ಸೇರುತ್ತಿದ್ದು, ಒಕ್ಕೂಟವು ಎಲ್ಲೆಡೆ ಶಕ್ತಿಶಾಲಿಯಾಗಿ ಹೊರಹೊಮ್ಮುತ್ತಿದೆ ಎಂದರು.

ಸರ್ಕಾರದ ಸೌಲಭ್ಯಗಳು ನೈಜ ಕಾರ್ಮಿಕರಿಗೆ ತಲುಪಬೇಕು. ಸಂಘಟನೆಗೆ ಸೇರಬಯಸುವ ಎಲ್ಲರಿಗೂ ಸದಸ್ಯತ್ವ ನೀಡಲಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕರಿಗಾಗಿ ಹಲವು ಯೋಜನೆಗಳನ್ನು ರೂಪಿಸಿದ್ದು, ಈ ಯೋಜನೆಗಳ ಕುರಿತು ಮಾಹಿತಿ ನೀಡುವುದರ ಜೊತೆಗೆ ಸೌಲಭ್ಯಗಳನ್ನು ತಲುಪಿಸುವ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಮಿಕರ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಬೆಳಕಿಗೆ ತರುವ ಕೆಲಸಗಳು ನಡೆಯುತ್ತಿಲ್ಲ. ಹೀಗಾಗಿ, ಶೀಘ್ರದಲ್ಲಿಯೇ ವಿಶ್ವ ಕಾರ್ಮಿಕರ ಒಕ್ಕೂಟದ ವತಿಯಿಂದ ಅಂತಹ ಪ್ರತಿಭೆಗಳನ್ನು ಗುರುತಿಸಿ, ಅವರ ಉನ್ನತಿಗೆ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಈಗಾಗಲೇ ಕಾರ್ಮಿಕರ ಮಕ್ಕಳಿಗಾಗಿ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡುತ್ತಿದೆ. ಆದರೆ, ನೈಜ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಈ ಸೌಲಭ್ಯ ತಲುಪುತ್ತಿಲ್ಲ. ಈ ವಿಚಾರದಲ್ಲಿಯೂ ಸಂಘಟನೆ ಗಮನಹರಿಸಲಿದೆ ಎಂದರು.

ಕಾರ್ಮಿಕರಿಗೆ ಸರ್ಕಾರಿ ಯೋಜನೆ ತಲುಪಿಸುವುದೇ ಗುರಿ

ಒಕ್ಕೂಟದ ನೂತನ ಉಪಾಧ್ಯಕ್ಷ ಶಿವಣ್ಣ ಮಾತನಾಡಿ, ರಾಮನಗರ ಜಿಲ್ಲೆಯಲ್ಲಿ ವಿಶ್ವ ಕಾರ್ಮಿಕರ ಒಕ್ಕೂಟವನ್ನು ನೂತನವಾಗಿ ರಚಿಸಲಾಗಿದೆ. ಶೀಘ್ರದಲ್ಲಿಯೇ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಸಂಘಟನೆಯನ್ನು ವಿಸ್ತರಿಸಲಾಗುವುದು. ಸರ್ಕಾರದ ಯೋಜನೆಗಳನ್ನು ಕಾರ್ಮಿಕರಿಗೆ ತಲುಪಿಸುವುದೇ ಸಂಘಟನೆಯ ಮುಖ್ಯ ಉದ್ದೇಶ ಎಂದರು. ಸಂಘಟನೆಯ ನೂತನ ಜಿಲ್ಲಾಧ್ಯಕ್ಷ ಗಿರಿಯಪ್ಪ ಮಾತನಾಡಿ, ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಕೋಟ್ಯಂತರ ರೂಪಾಯಿ ಬಿಡುಗಡೆ ಮಾಡುತ್ತಿದೆ. ಆದರೆ, ಅದು ಸರಿಯಾದ ರೀತಿಯಲ್ಲಿ ಕಾರ್ಮಿಕರಿಗೆ ತಲುಪುತ್ತಿಲ್ಲ. ಬಲಾಢ್ಯರಿಗೆ ಹೆಚ್ಚಿನ ಪ್ರಮಾಣದಲ್ಲಿ ಸೌಲಭ್ಯಗಳು ದೊರೆಯುತ್ತಿವೆ. ನೈಜ ಕಾರ್ಮಿಕರಿಗೆ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡುವ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಸಂಘಟನೆ ಸ್ಥಾಪನೆಯಾಗಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 21 ಸದಸ್ಯರನ್ನು ಒಳಗೊಂಡಂತೆ ಸಂಘ ರಚಿಸಲಾಗಿದೆ. ವಿಶ್ವ ಕಾರ್ಮಿಕರ ಒಕ್ಕೂಟಕ್ಕೆ ಪ್ರತಿ ತಾಲ್ಲೂಕಿನಿಂದ ನಾಲ್ವರು ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಸಂಘಟನೆ ರಚಿಸುವ ಜವಾಬ್ದಾರಿಯನ್ನು ನೂತನ ಜಿಲ್ಲಾಧ್ಯಕ್ಷರಿಗೆ ವಹಿಸಲಾಗಿದೆ ಎಂದು ಹೇಳಿದರು.

ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಕುಮಾರ್ ಎನ್., ರಾಜ್ಯ ಮಹಿಳಾ ಅಧ್ಯಕ್ಷೆ ಗಾಯಿತ್ರಿ, ರಾಜ್ಯ ಮಹಿಳಾ ಉಪಾಧ್ಯಕ್ಷೆ ಸುಮ ಮತ್ತಿತರರು ಹಾಜರಿದ್ದರು.

ಸಂಘಟನೆಯ ನೂತನ ಪದಾಧಿಕಾರಿಗಳು

ವಿಶ್ವ ಕಾರ್ಮಿಕರ ಒಕ್ಕೂಟದ ಜಿಲ್ಲಾಧ್ಯಕ್ಷರಾಗಿ ಗಿರಿಯಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಶಿವಣ್ಣ, ಪ್ರಧಾನ ಕಾರ್ಯದರ್ಶಿಯಾಗಿ ಅಶೋಕ್, ಖಜಾಂಚಿಯಾಗಿ ರವಿಕುಮಾರ್, ಮಹಿಳಾ ಅಧ್ಯಕ್ಷೆಯಾಗಿ ರುಕ್ಮಿಣಿ, ಸಹಾಯಕ ಕಾರ್ಯದರ್ಶಿಯಾಗಿ ನಾಗಯ್ಯ ಆಯ್ಕೆಯಾಗಿದ್ದಾರೆ. ಸಂಘಟನಾ ಕಾರ್ಯದರ್ಶಿಗಳಾಗಿ ಸುರೇಶ್, ಹನುಮಂತಣ್ಣ, ದಿನೇಶ್, ನವೀನ್ ಕುಮಾರ್ ಹಾಗೂ ಕುಮಾರಸ್ವಾಮಿ ಆಯ್ಕೆಯಾಗಿದ್ದಾರೆ.

ಹುಣಸೂರಿನ ಪೌರಕಾರ್ಮಿಕರಿಗೆ ಸನ್ಮಾನ

ಮೈಸೂರು: ನಗರದ ಸ್ವಚ್ಛತೆಗಾಗಿ ಶ್ರಮಿಸುವ ಪೌರಕಾರ್ಮಿಕರ ಸೇವೆಗೆ ಗೌರವದ ಸ್ಪರ್ಶ ನೀಡುವ ಉದ್ದೇಶದಿಂದ ವರ್ಷಾ ಹರೀಶ್ ಗೌಡ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರಿಗೆ ಭೋಜನಕೂಟ ಏರ್ಪಡಿಸುವುದರ ಜತೆಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು.

ನಗರದ ಬೋಗಾದಿಯಲ್ಲಿರುವ ಹುಣಸೂರು ಶಾಸಕ ಜಿ.ಡಿ. ಹರೀಶ್ ಗೌಡ ಅವರ ನಿವಾಸದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಹುಣಸೂರಿನಿಂದ ಆಗಮಿಸಿದ್ದ 60ಕ್ಕೂ ಹೆಚ್ಚು ಪೌರಕಾರ್ಮಿಕರಿಗೆ ಶಾಸಕ ಜಿ.ಡಿ. ಹರೀಶ್ ಗೌಡ, ವರ್ಷಾ ಹರೀಶ್ ಗೌಡ ಅವರುಗಳು ಸಮವಸ್ತ್ರ ನೀಡಿ, ಸಿಹಿ ವಿತರಿಸುವುದರ ಮೂಲಕ ಪ್ರೀತಿಯಿಂದ ಸತ್ಕರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ವರ್ಷಾ ಹರೀಶ್ ಗೌಡ, ಸಮಾಜದ ಸ್ವಚ್ಛತೆಗಾಗಿ ಹಗಲಿರುಳು ಶ್ರಮಿಸುವ ಪೌರಕಾರ್ಮಿಕರ ಸೇವೆಯನ್ನು ಗುರುತಿಸಿ ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. ಅವರ ಕಷ್ಟ-ಸುಖಗಳಿಗೆ ಸ್ಪಂದಿಸುವ ಮೂಲಕ ಅವರೊಂದಿಗೆ ನಾವಿದ್ದೇವೆ ಎಂಬ ಭರವಸೆ ಮೂಡಿಸಬೇಕು. ನವರಾತ್ರಿ ಹಬ್ಬದ ಸಂದರ್ಭದಲ್ಲಿ ಪೌರಕಾರ್ಮಿಕರನ್ನು ಆಹ್ವಾನಿಸಿ ಆತಿಥ್ಯ ನೀಡಿ ಅಭಿನಂದಿಸಿರುವುದು ಸಂತಸ ತಂದಿದೆ ಎಂದರು.

ವರ್ಷಾ ಹರೀಶ್ ಗೌಡ ಫೌಂಡೇಶನ್ ವತಿಯಿಂದ ಈ ಹಿಂದೆ ಮಹಿಳೆಯರಿಗೆ ಮಡಿಲು ತುಂಬುವ ಹಾಗೂ ಸೀಮಂತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಜನರ ಆಶೀರ್ವಾದ ಮತ್ತು ಪ್ರೋತ್ಸಾಹದಿಂದ ಇಂತಹ ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ನಡೆಸಲು ಸಾಧ್ಯವಾಗುತ್ತಿದೆ. ಮುಂದೆ ಜನಪರ ಕಾರ್ಯಕ್ರಮಗಳನ್ನು ಮುಂದುವರಿಸಲಾಗುವುದು ಎಂದು ಹೇಳಿದರು. ಸಮಾರಂಭದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಎಂ.ಡಿ.ಸುರೇಂದ್ರ, ಪ್ರಧಾನ ಕಾರ್ಯದರ್ಶಿ ಹರವೆ ಶ್ರೀಧರ್, ಜೆಡಿಎಸ್ ನಗರಾಧ್ಯಕ್ಷ ಶರವಣ, ಕಾರ್ಯದರ್ಶಿ ಸತೀಶ್ ಕುಮಾರ್, ಮುಖಂಡರಾದ ಕೆ.ಎಸ್.ಕುಮಾರ್, ಮಧು ಚಿಕನ್(ಗೌರಿ ಶಂಕರ್), ಪ್ರೇಮಕುಮಾರ್, ಸತೀಶ್ ಪಾಪಣ್ಣ, ಬಾಬು, ರಮೇಶ್, ಪೌರಕಾರ್ಮಿಕ ಮುಖಂಡ ಪೆರುಮಾಳ್, ನಂಜಪ್ಪ, ದೊಡ್ಡಹೆಜ್ಜೂರು ರಮೇಶ್, ಜಯಲಕ್ಷ್ಮೀ, ಕೃಷ್ಣರಾಜ ಗುಪ್ತ, ಕುಮಾರ್ ಸೇರಿ ಹಲವರಿದ್ದರು.

ನಿಸರ್ಗದತ್ತ ಯುವಕರ ಸಂಘ

ಸರಗೂರು: ರಾಮಾಯಣ ಮಹಾಕಾವ್ಯ ರಚಿಸಿದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮಕ್ಕೆ ಅ.22ರ ಗುರುವಾರ ಆಗಮಿಸಲಿರುವ ಶ್ರೀ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಪುರಿ ಸ್ವಾಮೀಜಿ ಸೇರಿದಂತೆ ಅನೇಕ ಗಣ್ಯರು ಹಾಗೂ ಎಲ್ಲ ಜನಾಂಗದ ಬಂಧುಗಳಿಗೆ ನಿಸರ್ಗದತ್ತ ಯುವಕರ ಸಂಘ ಹಾಗೂ ಆಗತ್ತೂರು ಗ್ರಾಮಸ್ಥರ ವತಿಯಿಂದ ಆತ್ಮೀಯ ಸ್ವಾಗತ ಕೋರಲಾಗಿದೆ.

ಗ್ರಾಮದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಅವರ ಪುತ್ಥಳಿಯನ್ನು ನಿರ್ಮಿಸಲಾಗಿದ್ದು, ಗುರುವಾರ ನಡೆಯಲಿರುವ ಅನಾವರಣ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಗಣ್ಯರ ಆಗಮನದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಿದೆ.

ಆದಿಕವಿ ಮಹರ್ಷಿ ವಾಲ್ಮೀಕಿ ಅವರು ರಚಿಸಿದ ರಾಮಾಯಣ ಮಹಾಕಾವ್ಯವು ಭಾರತೀಯ ಸಂಸ್ಕೃತಿ, ಪರಂಪರೆ ಹಾಗೂ ಮಾನವೀಯ ಮೌಲ್ಯಗಳ ಪ್ರತೀಕವಾಗಿದೆ. ಅವರ ಆದರ್ಶಗಳು, ತತ್ವಗಳು ಮತ್ತು ಜೀವನ ಸಂದೇಶಗಳನ್ನು ಸ್ಮರಿಸುವ ಉದ್ದೇಶದಿಂದ ಪುತ್ಥಳಿ ನಿರ್ಮಿಸಿರುವುದು ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ. ಕಾರ್ಯಕ್ರಮಕ್ಕೆ ಆಗಮಿಸಲಿರುವ ಸ್

20 October 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾವನಾಂತರಂಗ

ಹಿರಿಯರು ಹೇಳುವ ಮಾತು ಅನುಭವದಿಂದ, ಕಿರಿಯರು ಹೇಳುವ ಮಾತು ಪುಸ್ತಕದ ಪುಟದಿಂದ !

ಸ್ನೇಹಾ ಆನಂದ್

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

ಮುದ್ದೇನಹಳ್ಳಿ ನವರಾತ್ರಿ ಉತ್ಸವ ಸಂಪನ್ನ — ಪುಟ ಸಂ. 2

ವಿಶ್ವ ಕಾರ್ಮಿಕರ ಒಕ್ಕೂಟ ಘಟಕ ಅಸ್ತಿತ್ವಕ್ಕೆ — ಪುಟ ಸಂ. 3

ಮ್ಯಾರಥಾನ್, ಸ್ಕೇಟಿಂಗ್ ಓಟಕ್ಕೆ ಸಚಿವ ಪುಟ್ಟರಂಗಶೆಟ್ಟಿ ಹಸಿರು ನಿಶಾನೆ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 300 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಜಂಬೂಸವಾರಿಗೆ ಮೈಸೂರು ಸಜ್ಜು

ನಾಳೆ ಶುಭ ಮೀನ ಲಗ್ನದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುಷ್ಪಾರ್ಚನೆ

ಮೈಸೂರು: ನಾಡಹಬ್ಬ ಮೈಸೂರು ದಸರಾದ ಪ್ರಮುಖ ಘಟ್ಟ ವಿಜಯದಶಮಿ ದಿನ ನಡೆಯಲಿರುವ ವಿಶ್ವವಿಖ್ಯಾತ ಜಂಬೂಸವಾರಿಗೆ ಮೈಸೂರು ಸಜ್ಜಾಗಿದೆ.

ದಸರಾ ಜಂಬೂಸವಾರಿ ಅ.21ರಂದು ಬುಧವಾರ ನಡೆಯಲಿದೆ. ಸಂಜೆ 4.10ರಿಂದ 4.35ರ ವರೆಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಸಿಎಂ ಡಿ.ಕೆ.ಶಿವಕುಮಾರ್, ಡಿಸಿಎಂ ಜಿ.ಪರಮೇಶ್ವರ ಸೇರಿ ಗಣ್ಯರು ಜಂಬೂ ಸವಾರಿಗೆ ಚಾಲನೆ ನೀಡಲಿದ್ದಾರೆ. ಸಚಿವ ಸಂಪುಟ ಸದಸ್ಯರು ಭಾಗವಹಿಸಲಿದ್ದಾರೆ.

ಈ ಬಾರಿ ಮೊದಲ ಬಾರಿಗೆ ಕ್ಯಾಪ್ಟನ್ ಪ್ರಶಾಂತ ಆನೆ ಚಿನ್ನದ ಅಂಬಾರಿ ಹೊತ್ತು ಸಾಗಲಿದೆ. ಈ ಹಿಂದೆ ಜಂಬೂಸವಾರಿ ಕ್ಯಾಪ್ಟನ್ ಆಗಿದ್ದ ಅಭಿಮನ್ಯು ಈ ಬಾರಿ ನಿಶಾನೆ ಆನೆಯಾಗಿದೆ. ಗೋಪಿ ನೌಪತ್ ಆನೆಯಾಗಿ, ಒಂದನೇ ತಂಡದ ಸಾಲಾನೆಯಾಗಿ ಮಹೇಂದ್ರ ಮತ್ತು ಲಕ್ಷ್ಮಿ, ಎರಡನೇ ತಂಡದ ಸಾಲಾನೆಯಾಗಿ ಸುಗ್ರೀವ, ಚೈತ್ರ ಹಾಗೂ ಶ್ರೀರಾಮ, ಮೂರನೇ ಪುಟ 4ಕ್ಕೆ

ಚಿತ್ರ ನಟ–ನಟಿಯರು ಭಾಗಿ

ದಸರಾ ಮೆರವಣಿಗೆಯಲ್ಲಿ ಈ ಬಾರಿ ಸ್ಯಾಂಡಲ್ ವುಡ್‌ನ ಅನೇಕ ನಟ, ನಟಿಯರು ಭಾಗವಹಿಸುವ ಮೂಲಕ ಜನರನ್ನು ಆಕರ್ಷಿಸಲಿದ್ದಾರೆ. ಎರಡು ರಾಜ್ಯದ ಮುಖ್ಯಮಂತ್ರಿಗಳು ಭಾಗವಹಿಸಲು ಒಪ್ಪಿಗೆ ಸೂಚಿಸಿದ್ದಾರೆ. ಹೊರ ರಾಜ್ಯದ ಸ್ತಬ್ಧಚಿತ್ರ, ಕಲಾವಿದರು ಭಾಗವಹಿಸುವರು. ದೆಹಲಿಯಲ್ಲಿ ಸ್ವಾತಂತ್ರ್ಯ ದಿನದಂದು ಸಾಗುವ ಮೆರವಣಿಗೆ ಮಾದರಿಯಲ್ಲಿ ಭದ್ರತೆ ಒದಗಿಸಲು ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದೆ.

ಸಿದ್ದುಗೆ ಬ್ಲ್ಯಾಕ್‌ಮೇಲ್: ಕರಂದ್ಲಾಜೆ ಆರೋಪ

ಮೈಸೂರು: ಸಿದ್ದರಾಮಯ್ಯ ಅವರನ್ನು ಬ್ಲ್ಯಾಕ್ ಮೇಲ್ ಮಾಡಿ ರಾಜೀನಾಮೆ ಕೊಡಿಸಿದ್ದಾರೆ ಎನ್ನುವ ಮಾಹಿತಿ ಇದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ನಗರದ ಅರಮನೆ ಆವರಣದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ದಸರಾ ಗಜಪಡೆ ಮಾವುತರು ಮತ್ತು ಕಾವಾಡಿಗಳ ಕುಟುಂಬಕ್ಕೆ ಉಪಾಹಾರ ವ್ಯವಸ್ಥೆ ಮಾಡಿ ಮಾತನಾಡಿದ ಅವರು, ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ವಿವಾದದ ಬಗ್ಗೆ ಪ್ರತಿಕ್ರಿಯಿಸಿದರು.

ರಾಜ್ಯದಲ್ಲಿ ಬ್ಲ್ಯಾಕ್ ಮೇಲ್ ಸರ್ಕಾರ ಇದೆ. ಅವರ ಪಾರ್ಟಿ ಒಳಗೆ, ಸರ್ಕಾರದ ಒಳಗೆ ಬ್ಲ್ಯಾಕ್‌ಮೇಲ್ ಮಾಡಿಕೊಂಡು ಆಡಳಿತ ಮಾಡ್ತಿದ್ದಾರೆ. ಸಿದ್ದರಾಮಯ್ಯ ಅವರನ್ನು ಬ್ಲ್ಯಾಕ್‌ಮೇಲ್ ಮಾಡಿ ರಾಜೀನಾಮೆ ಕೊಡಿಸಿದ್ದಾರೆ ಅನ್ನೋ ಸುದ್ದಿ ಹರಿದಾಡುತ್ತಿದೆ. ಕರ್ನಾಟಕ ರಾಜ್ಯಕ್ಕೆ ಇದೊಂದು ಕಪ್ಪು ಚುಕ್ಕೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಅಧಿಕಾರ ಪಡೆಯಲು ಯಾರಿಗೋ ಬ್ಲ್ಯಾಕ್‌ಮೇಲ್ ಮಾಡ್ತಾರೆ. ಸ್ಟಿಂಗ್ ಆಪರೇಷನ್ ಮಾಡ್ತಾರೆ, ಅಧಿಕಾರ ದುರುಪಯೋಗ ಮಾಡ್ತಿದ್ದಾರೆ. ಸಿಡಿ ಇಟ್ಟುಕೊಂಡು ಕೆಲವರಿಗೆ ಬೆದರಿಸ್ತಾರೆ. ನಮ್ಮ ರಾಜ್ಯದಲ್ಲಿ ಏನಾಗ್ತಿದೆ ಅಂತಾ ಬೇರೆ ರಾಜ್ಯದವರು ಕೇಳ್ತಿದ್ದಾರೆ. ಇದು ಯಾರಿಗೂ ಶೋಭೆ ತರುವುದಿಲ್ಲ ಇದಕ್ಕೆ ಇತಿಶ್ರೀ ಆಡಬೇಕು. ತಕ್ಷಣ ಎಸ್‌ಐಟಿ ತನಿಖೆ ಆಗಬೇಕು ಎಂದು ಆಗ್ರಹಿಸಿದರು.

ಸ್ಟಿಂಗ್ ಆಪರೇಷನ್ ರೀತಿಯ ಕೆಲಸ ಮಾಡುವವರಿಗೆ ಉಗ್ರವಾದ ಶಿಕ್ಷೆ ಆಗಬೇಕು. ನಾನು ಸಿಎಂ ಬಳಿ ಮನವಿ ಮಾಡುತ್ತೇನೆ. ಜನರು ನಿಮ್ಮತ್ತ ಬೊಟ್ಟು ಮಾಡ್ತಿದ್ದಾರೆ ಎಂದು ಮೈಸೂರಿನಲ್ಲಿ ಶೋಭಾ ಕರಂದ್ಲಾಜೆ ವಾಗ್ದಾಳಿ ನಡೆಸಿದರು.

ದಸರಾ ರೀಲ್ಸ್‌ಗೆ ಬಹುಮಾನ: ಡಿಕೆಶಿ

ಬೆಂಗಳೂರು: ವಿಶ್ವವಿಖ್ಯಾತ ಮೈಸೂರು ದಸರಾ ಕಾರ್ಯಕ್ರಮಗಳ ರೀಲ್ಸ್ ಮಾಡುವವರಿಗೆ ಸರ್ಕಾರದಿಂದ ವಿಶೇಷ ಬಹುಮಾನ ನೀಡಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಸಿಎಂ ಡಿ.ಕೆ.ಶಿವಕುಮಾರ್ ಅವರು, ಯುವಕ, ಯುವತಿಯರು ದಸರಾ ಸಂಭ್ರಮದ ಬಗ್ಗೆ ರೀಲ್ಸ್ ಮಾಡಿ, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಿ. ಅತ್ಯುತ್ತಮ 100 ರೀಲ್ಸ್‌ಗಳಿಗೆ ಆಕರ್ಷಕ ಬಹುಮಾನ ನೀಡಲಾಗುವುದು ಎಂದು ಹೇಳಿದರು.

ಮೈಸೂರು ದಸರಾ ದೀಪಾಲಂಕಾರ, ಜಂಬೂಸವಾರಿ, ಆಹಾರ ಮೇಳ ಯಾವುದೇ ಇರಲಿ. ಯಾವುದೇ ರೀಲ್ಸ್ ಕಳುಹಿಸಿದರೂ 100 ಅತ್ಯುತ್ತಮ ರೀಲ್ಸ್‌ಬಹುಮಾನ ನೀಡುವುದಾಗಿ ಸಿಎಂ ಘೋಷಿಸಿದರು.

ದಸರಾ ಆರಂಭದಿಂದ ಅಂತ್ಯದವರೆಗೆ ನಿಮಗೆ ಏನೆಲ್ಲಾ ಇಷ್ಟವಾಯಿತೋ ಅದನ್ನು ರೀಲ್ಸ್ ಮಾಡಿ. ಮೈಸೂರು ದಸರಾ– 2026 ಎಂದು ಟ್ಯಾಗ್ ಮಾಡಲಾದ ಅತ್ಯುತ್ತಮ 100 ರೀಲ್ಸ್‌ಗಳಿಗೆ ಆಕರ್ಷಕ ಬಹುಮಾನ ನೀಡಲಾಗುವುದು ಎಂದರು.

ದೀಪಾಲಂಕಾರ ವಿಸ್ತರಣೆ

ಮೈಸೂರಿನ ದೀಪಾಲಂಕಾರ ಕುರಿತೂ ಮಾತನಾಡಿದ ಸಿಎಂ ಡಿ.ಕೆ.ಶಿವಕುಮಾರ್ ಅವರು, ದಸರಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಲೈಟಿಂಗ್ಸ್ ವೀಕ್ಷಿಸಿದ್ದೇನೆ. ನಿತ್ಯ ಲಕ್ಷಾಂತರ ಜನರು ಈ ಅದ್ಭುತ ದೀಪಾಲಂಕಾರ ನೋಡಿ ಕಣ್ತುಂಬಿಕೊಳ್ಳುತ್ತಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಮೈಸೂರು ದಸರಾ ಲೈಟಿಂಗ್ಸ್ ಅನ್ನು ದಸರಾ ನಂತರ 10 ದಿನಗಳ ಕಾಲ ವಿಸ್ತರಿಸಲು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು.

ಆಗಸದಲ್ಲಿ ಲೋಹದ ಹಕ್ಕಿಗಳ ಮೊರೆತ



ಮೈಸೂರು: ಬಾನಂಗಳದಲ್ಲಿ ಲೋಹದ ಹಕ್ಕಿಗಳು ಶಬ್ದ ಮಾಡಿಕೊಂಡು ಬರುತ್ತಿದ್ದಂತೆ ತಟ್ಟನೆ ಎಲ್ಲರ ಗಮನ ಸೆಳೆಯಿತು. ನೆರೆದಿದ್ದ ಸಹಸ್ರಾರು ಮಂದಿ ಕಣ್ತುಂಬಿಕೊಂಡು ನಿಂತಲ್ಲೇ ಸಂಭ್ರಮಿಸಿದರು.

ಭಾರತೀಯ ವಾಯುಪಡೆಯ ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡದ ಪೈಲಟ್‌ಗಳು ಸೋಮವಾರ ಬೆಳಿಗ್ಗೆ 11.55ಕ್ಕೆ ತಮ್ಮ ಪ್ರದರ್ಶನ ಆರಂಭಿಸಿದರು. ತ್ರಿವರ್ಣ ಧ್ವಜದ ಬಣ್ಣದ ಚಿತ್ತಾರ, ನಕ್ಷತ್ರ, ಗರುಡ ಇತರೆ ಚಿತ್ತಾರಗಳು ಗಮನ ಸೆಳೆದವು. ಬರೋಬ್ಬರಿ 25 ನಿಮಿಷಗಳ ಕಾಲ ನಡೆಸಿಕೊಟ್ಟ ವೈಮಾನಿಕ ಪ್ರದರ್ಶನ ನೋಡುಗರ ಮನಗೆದ್ದಿತು.

ಬಾನಂಗಳದಲ್ಲಿ ಸಾಹಸ ಪ್ರದರ್ಶನದ ಮೂಲಕ ಸಾವಿರಾರು ಪ್ರೇಕ್ಷಕರಲ್ಲಿ ಮೈ ರೋಮಾಂಚನಗೊಳಿಸಿತು. ನಗರದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆದ ಏರ್ ಶೋ ವೀಕ್ಷಿಸಲು ಸಾರ್ವಜನಿಕರು ಉತ್ಸುಕತೆಯಿಂದ ಆಗಮಿಸಿದ್ದರು. ಕೆಂಪು ಮತ್ತು ಬಿಳಿ ಬಣ್ಣದ 9 ಹಾಕ್ ಎಂಕೆ–132 ಜೆಟ್ ವಿಮಾನಗಳು ಆಗಸದಲ್ಲಿ ಒಟ್ಟಾಗಿ ಹಾರಾಟ ನಡೆಸಿದ ದೃಶ್ಯ ನೋಡುಗರಲ್ಲಿ ಅಚ್ಚರಿ ಮೂಡಿಸಿತು. ಸೂರ್ಯಕಿರಣ್ ತಂಡ ಕ್ಯಾಪ್ಟನ್‌ಗಳಾದ ಅಭಿಮನ್ಯು ತ್ಯಾಗಿ, ಅಜಯ್ ಕುಮಾರ್, ಗಗನ್, ವಿಷ್ಣು, ದಿವಾಕರ್ ಸಿಂಗ್ ನೇತೃತ್ವದಲ್ಲಿ ನಡೆಸಿದ ವಿವಾನಗಳ ಹಾರಾಟ ಸಾರ್ವಜನಿಕರಿಂದ ಮೆಚ್ಚುಗೆ ಪಡೆದವು.

ದೇಶದಾದ್ಯಂತ 800 ಶೋ ನೀಡಿದ್ದು, ನಾಲ್ಕೈದು ತಿಂಗಳು 600 ಕಿ.ಮೀ ವೇಗದಲ್ಲಿ ಸಂಚರಿಸುತ್ತದೆ. ಒಂಭತ್ತು ವಿಮಾನ ಹಾಗೂ 25 ಮಂದಿ ಕಾರ್ಯನಿರ್ವಹಿಸುತ್ತಾರೆ.

ಅಭಿಮನ್ಯು ತ್ಯಾಗಿ

ರಸ್ತೆಯಲ್ಲೇ ನಿಂತು ವೀಕ್ಷಣೆ

ಕವಾಯತು ಮೈದಾನದಲ್ಲಿ ನಡೆದ ವೈಮಾನಿಕ ಪ್ರದರ್ಶನವನ್ನು ಸಾವಿರಾರು ಮಂದಿ ಮೈದಾನದ ಹೊರಗೆ, ಮನೆ ಮಹಡಿ ಮೇಲೆ ನಿಂತು ಕಣ್ತುಂಬಿಕೊಂಡರು. ಮೈದಾನ ಭರ್ತಿಯಾಗಿದ್ದ ಹಿನ್ನೆಲೆಯಲ್ಲಿ ಒಳ ಹೋಗಲು ಆಗದೆ ಕೆಲವರು ರಸ್ತೆಯಲ್ಲೇ ನಿಂತು ವೀಕ್ಷಣೆ ಮಾಡಿದರು. ನಗರದ ಅನೇಕರು ತಮ್ಮ ಮನೆಯ ಮಹಡಿಯಲ್ಲಿ ನಿಂತು ವೀಕ್ಷಿಸಿದರು.

ಸಿದ್ದರಾಮಯ್ಯಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ

ಕೋಲಾರ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕೇಂದ್ರದಿಂದ ಸೋಮವಾರ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಶಿಕ್ಷಣ ಸಂಸ್ಥೆಯ 2025ರ 15ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಘೋಷಿಸಲಾಗಿತ್ತು. ಆದರೆ, ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಆಗಿದ್ದ ಹಿನ್ನೆಲೆಯಲ್ಲಿ ಸಿದ್ದರಮಯ್ಯ ಕಾರ್ಯಕ್ರಮಕ್ಕೆ ಬಂದಿರಲಿಲ್ಲ.

ನನಗೆ ಸಂಸ್ಥೆಯವರು ಗೌರವ ಡಾಕ್ಟರೇಟ್ ಪದವಿ ಕೊಟ್ಟಿದ್ದಾರೆ. ಅದಕ್ಕೆ ನಾನು ಅರ್ಹನೋ, ಅನರ್ಹನೋ ಗೊತ್ತಿಲ್ಲ. ಬೇಡವೆಂದರೂ ಕೊಟ್ಟಿದ್ದಾರೆ. ಎಂಟು ವರ್ಷ ಮುಖ್ಯಮಂತ್ರಿ ಆಗಿ ದೇವರಾಜ ಅರಸು ಅವರನ್ನು ಹಿಂದೆ ಹಾಕಿದ್ದೇನೆ 17 ಬಜೆಟ್ ಮಂಡಿಸಿದ್ದೇನೆ ಹೀಗಾಗಿ ನನಗೆ ಡಾಕ್ಟರೇಟ್ ಕೊಟ್ಟಿರಬಹುದು. ಈಗ ಸ್ವೀಕಾರ ಮಾಡಿದ್ದೇನೆ. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ ನನಗೆ ಡಾ.ಸಿದ್ದರಾಮಯ್ಯ ಎಂದಿದ್ದಾರೆ. ನಾನು ನಿಜವಾದ ಡಾಕ್ಟರ್ ಅಲ್ಲ; ನಾನು ವಕೀಲ. ಡಾ.ಸಿದ್ದರಾಮಯ್ಯ ಎಂದು ಕರೆಯಬೇಡಿ ಎಂದು ಹೇಳಿದರು.

ಇದಕ್ಕೂ ಮುನ್ನ ರಾಜ್ಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಬೆಳವಣಿಗೆ ಕುರಿತು ಸುದ್ದಿಗಾರರ ಪ್ರಶ್ನೆಗೆ, ನಾನು ಮಾಧ್ಯಮದವರ ಜೊತೆ ಮಾತನಾಡುವುದಿಲ್ಲ ಎಂದು ನಿರಾಕರಿಸಿದರು.

ಸ್ಟಿಂಗ್ ಆಪರೇಷನ್‌ನಿಂದ ಮನೆಯ ಮಕ್ಕಳಿಗೆ ಗೌರವ!

ದಾವಣಗೆರೆ: ಮನೆಯ ಹೆಣ್ಣು ಮಕ್ಕಳಿಗೆ ಸ್ಟಿಂಗ್ ಆಪರೇಷನ್‌ನಿಂದ ಗೌರವ ಜಾಸ್ತಿ ಆಗುತ್ತದೆ. ಆಗ ಯಾರೊಬ್ಬರೂ ಎಲ್ಲಿಗೂ ಹೊರಗೆ ಹೋಗದೆ ತಮ್ಮ ಮನೆಕಡೆ ಗಮನ ಹರಿಸುತ್ತಾರೆ ಎಂದು ಶಾಸಕ ಶಿವಗಂಗಾ ಬಸವರಾಜ್ ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ಈ ರೀತಿ ಮಾಡುವುದು ಒಂದು ತರ ಒಳ್ಳೆಯದು ಅನಿಸುತ್ತದೆ. ಸ್ಟಿಂಗ್ ಆಪರೇಷನ್ ನೋಡಿದರೆ ನಮಗೂ ಭಯವಾಗುತ್ತದೆ. ಯಾವ ರೀತಿಯ ರಾಜಕಾರಣ ಮಾಡಬೇಕು? ಜನರ ನಡುವೆ ಹೇಗೆ ಇರಬೇಕು? ಎನ್ನುವ ಭಯ ಕಾಡುತ್ತಿದೆ ಎಂದರು.

ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಸ್ಟಿಂಗ್ ಆಪರೇಷನ್ ಮೂಲಕವೇ ಕೆಳಗಿಳಿಸಿದ್ದಾರೆ ಎಂಬ ವಿರೋಧ ಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಸ್ವಚ್ಛ ರಾಜಕಾರಣಿ. ಅವರು ಈ ರೀತಿಯ ಸ್ಟಿಂಗ್ ಆಪರೇಷನ್‌ಗೆ ಬಗ್ಗುವ ವ್ಯಕ್ತಿ ಅಲ್ಲ ಎಂದು ತಿಳಿಸಿದರು. ಪುಟ 4ಕ್ಕೆ

ಮೈಸೂರು: 30 ವಲಸೆ ಮಕ್ಕಳ ರಕ್ಷಣೆ

ಮೈಸೂರು: ಮೈಸೂರು ದಸರಾ ಸಂದರ್ಭದಲ್ಲಿ ಕಳೆದ ವರ್ಷ ಅಪ್ರಾಪ್ತ ಬಾಲಕಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಘಟನೆಯಿಂದ ಎಚ್ಚೆತ್ತುಕೊಂಡಿರುವ ಜಿಲ್ಲಾಡಳಿತ, ಈ ಬಾರಿ ದಸರಾಗೆ ನಗರಕ್ಕೆ ವಲಸೆ ಬಂದಿರುವ ಕುಟುಂಬಗಳೊಂದಿಗೆ ಆಗಮಿಸಿರುವ ಮಕ್ಕಳ ರಕ್ಷಣೆಗೆ ಮುಂದಾಗಿದೆ.

ದಸರಾ ಉತ್ಸವಕ್ಕೆ ನಗರಕ್ಕೆ ವಲಸೆ ಬರುವ ಕುಟುಂಬಗಳ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಕಳೆದ ಆರು ದಿನಗಳಲ್ಲಿ ಬಲಮತದ ದುಡಿಮೆ ಹಾಗೂ ಇತರೆ ಸಂಕಷ್ಟಗಳಿಂದ 30 ಮಕ್ಕಳನ್ನು ರಕ್ಷಿಸಲಾಗಿದೆ.

ದಸರಾ ಉತ್ಸವದ ಸಮಯದಲ್ಲಿ ಬಲೂನ್, ಆಟಿಕೆ ಹಾಗೂ ಇತರೆ ವಸ್ತುಗಳನ್ನು ಮಾರಾಟ ಮಾಡಲು ಹಾವೇರಿ, ಕೊಪ್ಪಳ, ಕಲಬುರಗಿ, ರಾಯಚೂರು, ಬೀದರ್ ಮತ್ತು ವಿಜಯಪುರ ಸೇರಿದಂತೆ ಹೊರ ರಾಜ್ಯಗಳಿಂದಲೂ ನೂರಾರು ವಲಸೆ ಕುಟುಂಬಗಳು ತಮ್ಮ ಮಕ್ಕಳೊಂದಿಗೆ ಮೈಸೂರಿಗೆ ಆಗಮಿಸುತ್ತವೆ.

ಇಂತಹ ಮಕ್ಕಳ ಮೇಲೆ ನಡೆಯ ಬಹುದಾದ ಶೋಷಣೆ, ದೌರ್ಜನ್ಯ ತಡೆಯುವ ಉದ್ದೇಶದಿಂದ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳೊಂದಿಗೆ ಕೈಜೋಡಿಸಿ ಈ ವಿಶೇಷ ಕಾರ್ಯಾಚರಣೆ ನಡೆಸಿದೆ. ಇದು ವರೆಗೆ ರಕ್ಷಿಸಲಾದ ಮಕ್ಕಳನ್ನು ಸುರಕ್ಷಿತ ಆಶ್ರಯ ಕೇಂದ್ರಗಳಿಗೆ ದಾಖಲಿಸಿದೆ. ಉತ್ಸವ ಮುಗಿಯುವವರೆಗೆ ಈ ವಿಶೇಷ ನಿಗಾ ಹಾಗೂ ರಕ್ಷಣಾ ಕಾರ್ಯ ಮುಂದುವರಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಟಿಂಗ್ ಆಪರೇಷನ್ ಬೈಪಾಸ್ ಸರ್ಜರಿಯಂತೆ: ಜಾರಕಿಹೊಳಿ

ಗದಗ: ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ಎಂಬುದು ಬೈಪಾಸ್ ಸರ್ಜರಿಯಂತೆ ಆಗಿದೆ. ಯಾವಾಗ, ಯಾಕೆ, ಏನಾಯಿತು ಎಂದು ಯಾರಿಗೂ ಸಂಪೂರ್ಣ ಮಾಹಿತಿ ಇಲ್ಲ. ಈ ಬಗ್ಗೆ ಹೇಳುವ ಪರಿಸ್ಥಿತಿಯಲ್ಲಿ ಯಾರೂ ಇಲ್ಲ ಎಂದು ಸಚಿವ ಸತೀಶ ಜಾರಕಿಹೊಳಿ ಅಭಿಪ್ರಾಯಪಟ್ಟರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಕುರಿತು ಹೇಳಿಕೆ ನೀಡುವುದರಿಂದ ದೂರ ಇರಲು ಬಯಸುವೆ. ಸದ್ಯ ತನಿಖೆ ನಡೆಯುತ್ತಿದೆ. ವರದಿ ಸಲ್ಲಿಕೆಯಾದ ನಂತರ ಸರ್ಕಾರವೇ ಸಾರ್ವಜನಿಕವಾಗಿ ಮಾಹಿತಿ ನೀಡಲಿದೆ ಎಂದರು.

ಕಬ್ಬು ಬೆಳೆಗಾರರ ಹೋರಾಟದ ಕುರಿತು ಪ್ರತಿಕ್ರಿಯಿಸಿದ ಅವರು, ಬಾಲ್ ಮತ್ತು ಬ್ಯಾಟ್ ಕೇಂದ್ರ ಸರ್ಕಾರದ ಬಳಿ ಇದೆ. ಹಾಗಾಗಿ, ಕೇಂದ್ರವೇ ಈ ಬಗ್ಗೆ ತೀರ್ಮಾನ ಕೈಗೊಳ್ಳಬೇಕು. ಬೆಂಬಲ ಬೆಲೆ ಹೆಚ್ಚಿಸಿದರೆ ರೈತರೊಂದಿಗೆ ಸಕ್ಕರೆ ಕಾರ್ಖಾನೆಗಳಿಗೂ ಅನುಕೂಲವಾಗಲಿದೆ ಎಂದರು.



ಏಳು ವರ್ಷದಿಂದ ಸಕ್ಕರೆ ದರ ಹೆಚ್ಚಿಸಿಲ್ಲ. ಆದರೆ, ಪ್ರತಿವರ್ಷ ಕಬ್ಬಿನ ದರ ಹೆಚ್ಚಿಸುವುದರಿಂದ ಅಸಮತೋಲನ ಪುಟ 4ಕ್ಕೆ

ಕುಮಾರಸ್ವಾಮಿ ತಡೆಯುವರು ಯಾರು?

ಯಾವಾಗ ಬೇಕಾದರೂ ರಾಜ್ಯ ರಾಜಕೀಯಕ್ಕೆ ಬರಲಿ: ಜಿ.ಪರಮೇಶ್ವರ್

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಯಾವಾಗ ಬೇಕಾದರೂ ರಾಜ್ಯ ರಾಜಕೀಯಕ್ಕೆ ಮರಳಬಹುದು ಎಂದು ಉಪಮುಖ್ಯಮಂತ್ರಿ ಜಿ.ಪರಮೇಶ್ವರ್ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಪರಮೇಶ್ವರ್ ಅವರು, ರಾಜ್ಯ ರಾಜಕೀಯಕ್ಕೆ ಕುಮಾರಸ್ವಾಮಿ ಮರಳುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಆದರೆ 2028ರಲ್ಲಿ ಯಾರು ಅಧಿಕಾರಕ್ಕೆ ಬರುತ್ತಾರೆ ಎಂದು ಈಗಲೇ ಊಹಿಸುವುದು ಸರಿಯಲ್ಲ ಎಂದು ಹೇಳಿದರು.

2028ರಲ್ಲಿ ಯಾರು ಅಧಿಕಾರಕ್ಕೆ ಬರುತ್ತಾರೆ ಎಂಬುದನ್ನು ರಾಜ್ಯದ ಜನರೇ ನಿರ್ಧರಿಸಬೇಕು

ಮೊದಲ ಪುಟದಿಂದ

ಸ್ಟಿಂಗ್ ಆಪರೇಷನ್ ಬೈಪಾಸ್ ಸರ್ಜರಿಯಂತೆ: ಜಾರಕಿಹೊಳಿ

ಉಂಟಾಗಿದೆ. ಇದರಿಂದ ಕಾರ್ಖಾನೆಗಳಿಗೆ ತೊಂದರೆ ಎದುರಾಗಿದೆ. ಇದನ್ನು ಪರಿಹರಿಸುವ ಶಕ್ತಿ ಕೇಂದ್ರ ಸರ್ಕಾರಕ್ಕಿದೆ. ಶೀಘ್ರ ಕ್ರಮ ಕೈಗೊಂಡರೆ ಕಬ್ಬು ಬೆಳೆಗಾರರ ಧರಣಿ ಅಂತ್ಯವಾಗಬಹುದು ಎಂದು ಹೇಳಿದರು.

ಸ್ಟಿಂಗ್ ಕಿಂಗ್‌ಪಿನ್ ಬಂಧಿಸಿ: ಎಚ್‌ಡಿಕೆ ಗಡುವು ವಿಸ್ತರಣೆ

ಕುಮಾರಸ್ವಾಮಿ ಅವರು ಈ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಚೇರಿಯ ಬಳಿ ಧರಣಿಯನ್ನು ನಡೆಸಿದ್ದರು. ನಂತರ ಪಾದಯಾತ್ರೆ ಮೂಲಕ ಡಿಜಿ ಮತ್ತು ಐಜಿಪಿ ಅವರ ಕಚೇರಿ ಮುಂದೆ ಕೂಡ ಹೋರಾಟವನ್ನು ಮಾಡಿದ್ದರು.

ಜಂಬೂಸವಾರಿಗೆ ಮೈಸೂರು ಸಜ್ಜು

ತಂಡದ ಸಾಲಾನೆಯಾಗಿ ಶ್ರೀಕಂಠ, ಏಕಲವ್ಯ ಹಾಗೂ ಕುಮ್ಕಿ ಆನೆಗಳಾಗಿ ಕಾವೇರಿ ಮತ್ತು ರೂಪ ಜಂಬೂಸವಾರಿ ಮೆರವಣಿಗೆಯಲ್ಲಿರಲಿವೆ. ಇದರ ಜೊತೆಗೆ ಈ ಬಾರಿ ಜಂಬೂಸವಾರಿ ಮೆರವಣಿಗೆಯಲ್ಲಿ 40 ಕಲಾ ತಂಡಗಳು ಹಾಗೂ ಅನೇಕ ವಿಶೇಷ ಸ್ತಬ್ಧಚಿತ್ರಗಳು ಇರಲಿವೆ.

ಜಂಬೂಸವಾರಿ ಪೂರ್ವಾಭ್ಯಾಸ ಮೈಸೂರು ಅರಮನೆ ಮುಂಭಾಗ ನಡೆಯಿತು. ದಸರಾ ಗಜಪಡೆ, ಕುದುರೆಗಳು ಸೇರಿ ಜಂಬೂ ಸವಾರಿಯಲ್ಲಿ ಭಾಗವಹಿಸುವ ಪೊಲೀಸ್ ತಂಡ ಸಹ ಭಾಗವಹಿಸಿತ್ತು.

ಸ್ಟಿಂಗ್ ಆಪರೇಷನ್‌ನಿಂದ ಮನೆಯ ಮಕ್ಕಳಿಗೆ ಗೌರವ!

ಒಪ್ಪಂದದ ಪ್ರಕಾರ, ರಾಹುಲ್ ಗಾಂಧಿ ಹೇಳಿದಂತೆ ರಾಜೀನಾಮೆ ಕೊಟ್ಟಿದ್ದಾರೆ. ಮೂರು ವರ್ಷದ ನಂತರವೇ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷದ ಆಸ್ತಿ, ಮಾಸ್ ಲೀಡರ್. ಅವರನ್ನು ಡಿಸ್ಟರ್ಬ್ ಮಾಡಲು ವಿರೋಧ ಪಕ್ಷದವರು ಈ ರೀತಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ವರ್ತಮಾನ
ಜಾಹೀರಾತಿಗೆ ಉತ್ತಮ ಮಾಧ್ಯಮ

ಮುದ್ದೇನಹಳ್ಳಿ ನವರಾತ್ರಿ ಉತ್ಸವ ಸಂಪನ್ನ

ಮಹಾ ನವಮಿ: ಚಂಡಿಕಾ ಹೋಮ । ವಿಜಯದಶಮಿ: ಮಹಾರುದ್ರಯಾಗದ ಮಹಾಪೂರ್ಣಾಹುತಿ

ಚಿಕ್ಕಬಳ್ಳಾಪುರ: ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ಕಳೆದ ಎಂಟು ದಿನಗಳಿಂದ ನಡೆಯುತ್ತಿರುವ ನವರಾತ್ರಿ ಉತ್ಸವವು ಅ.21ರಂದು ವಿಜಯ ದಶಮಿಯಂದು ಸಮಾಪನಗೊಳ್ಳಲಿದೆ. ಸದ್ಗುರು ಶ್ರೀ ಮಧುಸೂದನ ಸಾಯಿ ಅವರ ಸಾನ್ನಿಧ್ಯದಲ್ಲಿ ನಡೆಯುತ್ತಿರುವ ಉತ್ಸವದ ಅಂಗವಾಗಿ ದುರ್ಗಾಪೂಜೆ, ವಿವಿಧ ಹೋಮಗಳು, ಮಹಾರುದ್ರ ಯಾಗ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಿವೆ.

ಸತ್ಯಸಾಯಿ ಗ್ರಾಮದ ಶ್ರೀ ಸತ್ಯಸಾಯಿ ಹೃದಯ ಮಂದಿರದ ಆವರಣದಲ್ಲಿರುವ ಯಾಗಶಾಲೆಯಲ್ಲಿ ಅ.11ರಂದು ಆರಂಭವಾದ ನವರಾತ್ರಿ ಉತ್ಸವದಲ್ಲಿ ನಾಡಿನ ವಿವಿಧ ಗಣ್ಯರು, ಧಾರ್ಮಿಕ ಮುಖಂಡರು, ಶಿಕ್ಷಣ ತಜ್ಞರು ಹಾಗೂ ಭಕ್ತರು ಭಾಗವಹಿಸಿದ್ದಾರೆ.

ಮಹಾ ನವಮಿಯಂದು ಚಂಡಿಕಾ ಹೋಮ

ಅ.20ರಂದು ನವರಾತ್ರಿ ಉತ್ಸವದ ಅಂಗವಾಗಿ ಬೆಳಿಗ್ಗೆ 7.30ಕ್ಕೆ ಚಂಡಿಕಾ ಹೋಮ ನಡೆಯಲಿದೆ. ಇದೇ ವೇಳೆ ಅ.18ರಿಂದ ಆರಂಭವಾಗಿರುವ ಮಹಾ ರುದ್ರಯಾಗ ಮುಂದುವರಿಯಲಿದ್ದು, ರುದ್ರ ಪಾರಾಯಣ, ರುದ್ರಾಭಿಷೇಕ, ರುದ್ರ ಹೋಮ, ಮೃತ್ಯುಂಜಯ ಹೋಮ ಹಾಗೂ ಸಾಯಿ ಗಾಯತ್ರಿ ಹೋಮ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ. ಸಂಜೆ ಧಾರ್ಮಿಕ ಕಾರ್ಯಕ್ರಮಗಳು, ಸಾಂಸ್ಕೃತಿಕ ಪ್ರಸ್ತುತಿಗಳು ನಡೆಯಲಿವೆ.

ಎಂಟು ದಿನಗಳ ಧಾರ್ಮಿಕ ಆಚರಣೆ

ಅ.11ರಂದು ಸಹಸ್ರ ಮೋದಕ ಗಣಪತಿ ಹೋಮ, ನವಗ್ರಹ ಹೋಮ ಹಾಗೂ ಶನಿ ಶಾಂತಿ ವಿಧಿವಿಧಾನಗಳೊಂದಿಗೆ ಉತ್ಸವ ಆರಂಭವಾಯಿತು. ಅ.12ರಂದು ದುರ್ಗಾ ಹೋಮ, ಭಗವತಿ ತ್ರಿಕಾಲ ಪೂಜೆ ಹಾಗೂ ಸಾಮೂಹಿಕ ಲಲಿತಾ ಸಹಸ್ರನಾಮ ಪಠಣ ನಡೆಯಿತು. ಅ.13ರಂದು ಪವಮಾನ ಹೋಮ ಮತ್ತು ಆಶ್ಲೇಷಬಲಿ, ಅ.14ರಂದು ಧನ್ವಂತರಿ ಹೋಮ ಹಾಗೂ ವಿಷ್ಣು ಸಹಸ್ರನಾಮ ಹೋಮ ನೆರವೇರಿದವು. ಅ.15ರಂದು ಲಲಿತಾ ಹೋಮ, ದುರ್ಗಾ ಹೋಮ, ಸುವಾಸಿನಿ ಮತ್ತು ಕನ್ಯಾ ಪೂಜೆ, ಅ.16ರಂದು ಮೇಧಾ ದಕ್ಷಿಣಾಮೂರ್ತಿ ಹೋಮ ಹಾಗೂ ಮಹಾಸರಸ್ವತಿ ಹೋಮಗಳು ನಡೆದವು. ಅ.17ರಂದು ಲಕ್ಷ್ಮೀನರಸಿಂಹ ಹೋಮ ಮತ್ತು ಗಾಯತ್ರಿ ಹೋಮ ನೆರವೇರಿದರೆ, ಅ.18ರಂದು ರಾಮತಾರಕ ಹೋಮ, ಆಂಜನೇಯ ಹೋಮ ಹಾಗೂ ಸಾಯಿ ಗಾಯತ್ರಿ ಜಪ ಪುರಸ್ಸರ ಹೋಮಗಳೊಂದಿಗೆ ಮಹಾರುದ್ರಯಾಗಕ್ಕೂ ಚಾಲನೆ ದೊರೆಯಿತು.

ವಿಜಯದಶಮಿಯಂದು ಮಹಾಪೂರ್ಣಾಹುತಿ

ಅ.21ರಂದು ವಿಜಯದಶಮಿಯಂದು ಬೆಳಿಗ್ಗೆ 5.30ಕ್ಕೆ ಮಂಗಳವಾದ್ಯಗಳೊಂದಿಗೆ ಅಂತಿಮ ದಿನದ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿವೆ. ಬೆಳಿಗ್ಗೆ 6.30ಕ್ಕೆ ಅರುಣ ಪಾರಾಯಣ, ಮಹಾನ್ಯಾಸ ಪಾರಾಯಣ, ರುದ್ರ ಪಾರಾಯಣ ಹಾಗೂ ರುದ್ರಾಭಿಷೇಕ ನಡೆಯಲಿವೆ. ಬೆಳಿಗ್ಗೆ 10 ಗಂಟೆಗೆ ರುದ್ರ ಹೋಮ ಮತ್ತು ಸಾಯಿ ಗಾಯತ್ರಿ ಹೋಮ ದೊಂದಿಗೆ ಮಹಾಪೂರ್ಣಾಹುತಿ ನೆರವೇರಲಿದೆ. ಬಳಿಕ ಅಗ್ನಿ ಸಂಯೋಜನೆ, ಕುಂಭಾಭಿಷೇಕ ಹಾಗೂ ಮಹಾಮಂಗಳಾರತಿ ನಡೆಯಲಿವೆ. ಇದೇ ದಿನ ಲಕ್ಷ್ಮೀನಾರಾಯಣ ಹೃದಯ ಹೋಮ ಮತ್ತು ಕುಬೇರ ಲಕ್ಷ್ಮೀ ಹೋಮಗಳೂ ನಡೆಯಲಿದ್ದು, ನವರಾತ್ರಿ ಉತ್ಸವದ ಧಾರ್ಮಿಕ ವಿಧಿವಿಧಾನಗಳು ಪೂರ್ಣಗೊಳ್ಳಲಿವೆ. ಸತ್ಯಸಾಯಿ ಗ್ರಾಮದ ಪ್ರೇಮಾಮೃತಂ ಸಭಾಂಗಣದಲ್ಲಿ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ದುರ್ಗಾದೇವಿ ಮೂರ್ತಿಗಳು ವಿಶೇಷ ಆಕರ್ಷಣೆ

ದುರ್ಗಾಪೂಜೆಯ ಅಂಗವಾಗಿ ದೇವಿಯ ವಿವಿಧ ಸ್ವರೂಪಗಳನ್ನು ಆರಾಧಿಸಲಾಗುತ್ತಿದೆ. ಪಶ್ಚಿಮ ಬಂಗಾಳದ ಕೋಲ್ಕತ್ತಾದ ಕುಮಾರ್ಟುಲಿಯಿಂದ ವಿಶೇಷವಾಗಿ ತರಿಸಲಾದ ಗಂಗಾನದಿಯ ಮಣ್ಣಿನ ದುರ್ಗಾದೇವಿಯ ಮೂರ್ತಿಗಳು ಪೂಜೆಯ ಕೇಂದ್ರಬಿಂದುವಾಗಿವೆ. ಬಂಗಾಳದ ಸಾಂಪ್ರದಾಯಿಕ ಧಾಕಿ ಕಲಾವಿದರ ವಾದನ ಉತ್ಸವಕ್ಕೆ ವಿಶೇಷ ಮೆರುಗು ನೀಡಿದೆ. ಪ್ರತಿದಿನ ಸಂಜೆ ಕುಂಕುಮಾರ್ಚನೆ, ಚಂಡಿಕಾ ಪಾರಾಯಣ, ಲಕ್ಷ್ಮೀನಾರಾಯಣ ಹೃದಯ ಪಾರಾಯಣ, ಮಹಾಮಂಗಳಾರತಿ ನಡೆಯುತ್ತಿವೆ.



ರಸ್ತೆ ಕುಸಿತದ ಭೀತಿ

ಮಾಗಡಿ: ಮಾಗಡಿ ಪಟ್ಟಣದಿಂದ ಗುಡೇಮಾರನಹಳ್ಳಿ ಮುಖ್ಯರಸ್ತೆ ಮೂಲಕ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶಕ್ಕೆ ಕಾವೇರಿ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ನಡೆಯುತ್ತಿದ್ದು, ಬಾಲಾಜಿ ಚಿತ್ರಮಂದಿರದ ಮುಂಭಾಗದ ರಸ್ತೆಯಲ್ಲಿ ಮಳೆ ಹಾಗೂ ಮಣ್ಣು ಕುಸಿತದಿಂದ ರಸ್ತೆ ಕುಸಿಯುವ ಹಂತ ತಲುಪಿದೆ. ಇದರಿಂದ ವಾಹನ ಸವಾರರು ಹಾಗೂ ಸ್ಥಳೀಯ ನಿವಾಸಿಗಳು ಆತಂಕಕ್ಕೊಳಗಾಗಿದ್ದಾರೆ.

ಪೈಪ್‌ಲೈನ್ ಕಾಮಗಾರಿಯಿಂದ ರಸ್ತೆ ದುರ್ಬಲಗೊಂಡಿದ್ದು, ಮಳೆಯಿಂದ ಮಣ್ಣು ಕುಸಿಯುತ್ತಿರುವ ಹಿನ್ನೆಲೆಯಲ್ಲಿ ರಸ್ತೆಯಲ್ಲಿ ಅಪಾಯದ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ಕಾಮಗಾರಿ ನಡೆಯುತ್ತಿ ರುವ ಸ್ಥಳದಲ್ಲಿ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂ ಡಿಲ್ಲ ಎಂಬುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದ್ದು, ರಸ್ತೆ ಕುಸಿತದಿಂದ ವಾಹನ ಸವಾರರು ತೊಂದರೆ ಅನುಭವಿ ಸುತ್ತಿದ್ದಾರೆ. ಅದರಲ್ಲೂ ರಾತ್ರಿ ವೇಳೆ ಬೀದಿದೀಪಗಳಿಲ್ಲದೆ ರಸ್ತೆ ಮೇಲಿನ ಗುಂಡಿಗಳು ಹಾಗೂ ಅಪಾಯಕಾರಿ ಸ್ಥಳಗಳು ಗೋಚರಿಸದ ಕಾರಣ ಅಪಘಾತ ಸಂಭವಿಸುವ ಆತಂಕ ಎದುರಾ ಗಿದೆ. ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ಜೀವಭಯದಲ್ಲೇ ಸಂಚರಿಸುವಂತಾಗಿದೆ.

ಅನಾಹುತ ಸಂಭವಿಸುವ ಮುನ್ನ ಎಚ್ಚೆತ್ತುಕೊಳ್ಳಲಿ

ಸಂಬಂಧಪಟ್ಟ ಗುತ್ತಿಗೆದಾರರು ಹಾಗೂ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ಅಪಾಯಕಾರಿ ಪ್ರದೇಶದಲ್ಲಿ ಮುನ್ನೆಚ್ಚರಿಕೆ ಫಲಕಗಳನ್ನು ಅಳವಡಿಸಬೇಕು. ರಸ್ತೆ ಕುಸಿಯದಂತೆ ಅಗತ್ಯ ದುರಸ್ತಿ ಕಾರ್ಯ ಕೈಗೊಂಡು, ರಾತ್ರಿ ವೇಳೆ ವಾಹನ ಸವಾ ರರಿಗೆ ಅಪಾಯದ ಅರಿವು ಮೂಡಿಸುವ ವ್ಯವಸ್ಥೆ ಮಾಡಬೇಕು. ನಿರ್ಲಕ್ಷ್ಯದಿಂದ ಅನಾ ಹುತ ಸಂಭವಿಸುವ ಮುನ್ನವೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು ಎಂದು ಸ್ಥಳೀಯ ರಾದ ಮಧು, ರಮೇಶ್, ಅಂಜು, ಕರಡಿ ನಾಗರಾಜು ಒತ್ತಾಯಿಸಿದ್ದಾರೆ.

ಚೌಡೇಶ್ವರಿ ದೇವಿಗೆ ವಿಶೇಷ ಪೂಜೆ

ಬೆಳಕವಾಡಿ: ನವರಾತ್ರಿ 8ನೇ ದಿನದ ಅಂಗವಾಗಿ ಭಾನುವಾರ ಗ್ರಾಮದ ಶ್ರೀ ಚೌಡೇಶ್ವರಿ ದೇವರಿಗೆ ದುರ್ಗಾಷ್ಟಮಿ ವಿಶೇಷಾಲಂಕಾರದ ಜತೆಗೆ ವಿಶೇಷಪೂಜೆ ಸಲ್ಲಿಸಲಾಯಿತು. ತಾಲೂಕಿನ ಬೆಳಕವಾಡಿ ಗ್ರಾಮದ ದೇವಾಂಗ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ಅಮ್ಮ ನವರ ದೇವಸ್ಥಾನದಲ್ಲಿ ನವರಾತ್ರಿ 8ನೇ ದಿನದ ಅಂಗವಾಗಿ ದುರ್ಗಾಷ್ಟಮಿಯನ್ನು ಭಾನುವಾರದ ಅರ್ಚಕ ಅಂಜನ್ ಕುಮಾರ್ ದೇವಿಗೆ ಸಿಂಹವಾಹಿನಿ ಅಲಂಕಾರ, ದುರ್ಗಾ ಸಹಸ್ರನಾಮದ ಜತೆಗೆ ಅಭಿಷೇಕ, ಮಹಾಮಂಗಳಾರತಿ ನೆರವೇರಿಸಿದರು. ಬಳಿಕ ಭಕ್ತರು ಆಗಮಿಸಿ ದೇವರದರ್ಶನ ಪಡೆದು ಇಷ್ಟಾರ್ಥಗಳನ್ನು ಈಡೇರಿಸುವಂತೆ ಪ್ರಾರ್ಥನೆ ಸಲ್ಲಿಸಿದರು. ಬಳಿಕ ದೇವಸ್ಥಾನದ ವತಿಯಿಂದ ಪ್ರಸಾದ ವಿತರಣೆ ಮಾಡಲಾಯಿತು.

ಮಂಡ್ಯ: 21ರಂದು ದಸರಾ ಸಾಂಸ್ಕೃತಿಕ ಉತ್ಸವ

ಮಂಡ್ಯ: ಕಳೆದ 13 ವರ್ಷಗಳ ಹಿಂದೆ ಮಂಡ್ಯ ಸಾಂಸ್ಕೃತಿಕ ಪರಂಪರೆಗೆ ಹೊಸ ಭಾಷ್ಯ ಬರೆದ ಮಂಡ್ಯ ಯೂತ್ ಗ್ರೂಪ್ ವತಿಯಿಂದ ಮಂಡ್ಯ ದಸರಾ ಸಾಂಸ್ಕೃತಿಕ ಉತ್ಸವ ಅ.21ರ ವಿಜಯದಶಮಿಯಂದು ಮಧ್ಯಾಹ್ನ 2.30ಕ್ಕೆ ನಡೆಯಲಿದೆ ಎಂದು ಗ್ರೂಪ್ ನ ಅಧ್ಯಕ್ಷ ಡಾ.ಅನಿಲ್ ಆನಂದ್ ತಿಳಿಸಿದ್ದಾರೆ.

ಅಂದು ಮಧ್ಯಾಹ್ನ 2.30 ಗಂಟೆಗೆ ಶ್ರೀ ಕಾಳಿಕಾಂಬ ದೇಗುಲದ ಆವರಣದಲ್ಲಿನ ಗಜೇಂದ್ರ ಮೋಕ್ಷ ಕೊಳದ ಬಳಿಯ ಬನ್ನಿ ಮರಕ್ಕೆ ಧನಿಷ್ಠ ನಕ್ಷತ್ರ ಮಕರ ಲಗ್ನದಲ್ಲಿ ಬನ್ನಿ ಪೂಜೆ ನೆರವೇರಿಸಲಾಗುವುದು. ನಂತರ ಶ್ರೀ ಚಾಮುಂಡೇಶ್ವರಿ ದೇವಿಯ ಭವ್ಯ ಮೆರವಣಿಗೆಯನ್ನು ಇಪ್ಪ ತ್ತಕ್ಕೂ ಹೆಚ್ಚು ಜಾನಪದ ಕಲಾತಂಡ ಗಳೊಂದಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಅದ್ಧೂರಿಯಾಗಿ ಮೆರವ ಣಿಗೆ ಮಾಡಲಾಗುವುದು.

ಮುಖ್ಯವಾಗಿ ನಾಗರಹೊಳೆ ತಂಡದಿಂದ ಅಡಿವೆ ಕುಣಿತ, ಬೆಂಕಿ ಭರಾಟೆ, ದೊಣ್ಣೆವರಸೆ, ವೀರಗಾಸೆ, ಭದ್ರಕಾಳಿ ಕುಣಿತ, ಪುರುಷ ಮತ್ತು ಮಹಿಳೆಯರಿಂದ ಡೊಳ್ಳು ಕುಣಿತ, ಕರಗ ನೃತ್ಯ, ಕೀಲು ಕುದುರೆ, ಡವರಿ ಸಮಾಜದವರಿಂದ ಬ್ಯಾಂಡ್, ನಂದಿ ಧ್ವಜ, ಕಂಸಾಳೆ, ಯುವತಿಯರಿಂದ ಪಟ ಕುಣಿತ, ತುಮಕೂರಿನ ಚಿಲಿ ಪಿಲಿ ಗೊಂಬೆ, ನಗಾರಿ, ಪೂಜಾ ಕುಣಿತ, ಸಂತೆಕಸಲಗೆರೆ ಜಡೆಕೋಲಾಟ, ಕೇರಳ ಚಂಡೆ, ನಾದಸ್ವರ, ಹಳ್ಳಿಕಾರ್ ಜೋಡೆತ್ತು, ಬೆಳ್ಳಿರಥದಲ್ಲಿ ಕುಳಿತ ಮಹಾರಾಜ ಕಲಾತಂಡಗಳು ಭಾಗವಹಿಸಲಿವೆ. ಇದರೊಂದಿಗೆ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಭವ್ಯ ಮೆರವಣಿಗೆ ನಡೆಯಲಿದೆ. ಗ್ರೂಪ್ನ ಪದಾಧಿಕಾರಿಗಳು ಮಧ್ಯಾಹ್ನ 1 ಗಂಟೆ ವೇಳೆಗೆ ಬಿಳಿ ಬಣ್ಣದ ಶರ್ಟ್ ಧರಿಸಿ ಪೂಜೆಯಲ್ಲಿ ಪಾಲ್ಗೊಳ್ಳುವಂತೆ ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಕಾವಾ ಕಾಲೇಜಿನಲ್ಲಿ ಕಲಾಜಾತ್ರೆಗೆ ಚಾಲನೆ

ಮೈಸೂರು: ದಸರಾ ಮಹೋತ್ಸವದ ಅಂಗವಾಗಿ ದಸರಾ ಲಲಿತಕಲೆ ಮತ್ತು ಕರಕುಶಲಕಲೆ ಹಾಗೂ ಕಾವಾ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಸಿದ್ಧಾರ್ಥ ನಗರದಲ್ಲಿರುವ ಕಾವಾ ಕಾಲೇಜಿನಲ್ಲಿ ಇಂದು ಆಯೋಜಿಸಲಾಗಿದ್ದ ಎರಡನೇ ವರ್ಷದ ಕಲಾ ಜಾತ್ರೆ ಯಶಸ್ವಿಯಾಗಿ ನಡೆಯಿತು

ಒಂದು ದಿನದ ಕಲಾ ಜಾತ್ರೆಗೆ ಸುಪ್ರಸಿದ್ಧ ಶಿಲ್ಪ ಕಲಾವಿದ ಅರುಣ್ ಯೋಗಿರಾಜ್ ಚಾಲನೆ ನೀಡಿದರು. ರಾಜ್ಯ ಹಾಗೂ ಹೊರ ರಾಜ್ಯದ 80ಕ್ಕೂ ಹೆಚ್ಚು ವೃತ್ತಿಪರ ಹಾಗೂ ಹವ್ಯಾಸಿ ಕಲಾವಿದರ ಕಲಾಕೃತಿಗಳನ್ನು ಪ್ರದರ್ಶಿಸಿ ಮಾರಾಟಕ್ಕೆ ಇಡಲಾಗಿತ್ತು. ಚಿತ್ರಕಲೆ ಶಿಲ್ಪ ಕಲೆ ಗ್ರಾಫಿಕ್ಸ್ ಕಲೆ ಕರಕುಶಲ ಕಲೆ ಹಾಗೂ ಇನ್ನಿತರ ಮಾಧ್ಯಮದ ಪ್ರಕಾರಗಳ ಕಲಾ ಕೃತಿಗಳು ಗಮನ ಸೆಳೆ ದವು. ಕಲಾವಿದನ ಕಲ್ಪನೆ ಹಾಗೂ ಕೈಚಳಕದಲ್ಲಿ ಮೂಡಿ ಬಂದಿದ್ದ ಒಂದೊಂದು ಕಲಾ ಕೃತಿಗಳು ನೋಡುಗರ ಕಣ್ಮನ ಸೆಳೆದವು.ಈ ಸಂದರ್ಭ ಮಾತನಾಡಿದ ಅರುಣ್ ಯೋಗಿರಾಜ್ ಮೈಸೂರಿನ ಕಲಾವಿದರಿಗೆ ವರ್ಷಪೂರ್ತಿ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಶಾಶ್ವತ ಕಲಾ ಕೇಂದ್ರ ಸ್ಥಾಪಿಸಬೇಕು. ಮೈಸೂರು ದಸರಾ ಹಾಗೂ ಸಾಂಸ್ಕೃತಿಕ ಪರಂಪರೆಯಲ್ಲಿ ಕಲಾವಿದರ ಕೊಡುಗೆ ಅಪಾರವಾಗಿದೆ. ಕಲಾವಿದರ ಕಲೆಗಳು ಕೇವಲ ಕೆಲ ದಿನಗಳ ಕಾರ್ಯಕ್ರಮಕ್ಕೆ ಸೀಮಿತವಾಗದೆ, ವರ್ಷ ವಿಡೀ ಅವಕಾಶ ಕಲ್ಪಿಸಬೇಕು ಎಂದರು. ನಂತರ ಮಾತ ನಾಡಿದ ಶಾಸಕ ತನ್ವೀರ್ ಸೇಠ್, ಕಳೆದ ವರ್ಷದಿಂದ ಆರಂಭವಾದ ಕಲಾ ಜಾತ್ರೆಗಿಂತ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಕಲಾವಿದರು ಪಾಲ್ಗೊಂಡಿದ್ದಾರೆ. ಕಾವಾ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಕಲೆ ಮತ್ತು ಸಂಸ್ಕೃತಿಯ ಪೋಷಣೆಗೆ ಕೈಜೋಡಿಸಿರುವುದು ಶ್ಲಾಘನೀಯ ಎಂದರು. ಇದೇ ಸಂದರ್ಭ ನಿಕಟಪೂರ್ವ ಕಾವಾ ಡೀನ್ ದೇವರಾಜು, ಕಾವಾ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಮಂಜು ಪ್ರಸಾದ್, ಉಪಾಧ್ಯಕ್ಷ ಮಧುಸೂದನ್, ಕಾರ್ಯದರ್ಶಿ ಸೂರ್ಯ, ಖಜಾಂಚಿ ಹರೀಶ್ ಗಂಗಾಧರ ಹೆಗಡೆ, ನಿರ್ದೇಶಕರಾದ ರಮೇಶ್, ಶ್ವೇತಾ, ಇನ್ಸಾ ಉಮ್ಮೆಹಾನಿ, ಸೈಯದ್ ಮುಜಾಯಿದ್ ಹಾಗೂ ಪವನ್ ಹಾಜರಿದ್ದರು.

ನಂದಿನಿ ಪಶು ಆಹಾರದಲ್ಲಿ ಕಲಬೆರಕೆ ಆರೋಪ

ಮಾಗಡಿಯ ಹುಚ್ಚ ಹನುಮೇಗೌಡನ ಪಾಳ್ಯದ ರೈತರ ಆಕ್ರೋಶ

ಮಾಗಡಿ: ಮಾಗಡಿ ತಾಲ್ಲೂಕಿನ ಹುಚ್ಚ ಹನುಮೇಗೌಡನ ಪಾಳ್ಯ ದಲ್ಲಿ ನಂದಿನಿ ಪಶು ಆಹಾರದಲ್ಲಿ ಮರಳು ಹಾಗೂ ಬಿಳಿ ಕಲ್ಲು ಗಳು ಮಿಶ್ರಣವಾಗಿವೆ ಎಂಬ ಗಂಭೀರ ಆರೋಪ ಕೇಳಿಬಂದಿದ್ದು, ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಾನುವಾರುಗಳಿಗೆ ನೀಡಲು ತಂದಿದ್ದ ಪಶು ಆಹಾರವನ್ನು ನೀರಿನಲ್ಲಿ ನೆನೆಸಿ ಪರಿಶೀಲಿಸಿದಾಗ ಕಲ್ಮಶ ಪತ್ತೆಯಾಗಿದೆ ಎಂದು ರೈತರು ತಿಳಿಸಿದ್ದಾರೆ.

ರೈತರೊಬ್ಬರು ಸುಮಾರು 6 ಕೆ.ಜಿ. ಪಶು ಆಹಾರವನ್ನು ನೀರಿನಲ್ಲಿ ನೆನೆಸಿ ಪರಿಶೀಲಿಸಿದಾಗ, ಅದರಲ್ಲಿ ಸುಮಾರು 1ರಿಂದ 1.5 ಕೆ.ಜಿ.ಯಷ್ಟು ಮರಳು ಮತ್ತು ಕಲ್ಲುಗಳು ಪತ್ತೆಯಾಗಿವೆ ಎನ್ನ ಲಾಗಿದೆ. ಇದರಿಂದ ಪಶು ಆಹಾರದ ಗುಣಮಟ್ಟದ ಬಗ್ಗೆ ಅನು ಮಾನ ವ್ಯಕ್ತವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಪರಿಶೀಲನೆ ನಡೆಸಬೇಕೆಂಬ ಒತ್ತಾಯ ಕೇಳಿಬಂದಿದೆ.

ಕಲ್ಲು ಹಾಗೂ ಮರಳು ಮಿಶ್ರಿತ ಪಶು ಆಹಾರವನ್ನು ಜಾನುವಾ ರುಗಳಿಗೆ ನೀಡುವುದರಿಂದ ಅವುಗಳ ಆರೋಗ್ಯದ ಮೇಲೆ ದುಷ್ಪ ರಿಣಾಮ ಉಂಟಾಗುವ ಆತಂಕವಿದೆ. ಹಾಲಿನ ಉತ್ಪಾದನೆಯ ಮೇಲೂ ಪರಿಣಾಮ ಬೀರಬಹುದು ಎಂದು ರೈತರು ಕಳವಳ ವ್ಯಕ್ತಪಡಿಸಿ ದ್ದಾರೆ. ಲಕ್ಷಾಂತರ ರೂ. ವೆಚ್ಚ ಮಾಡಿ ಹಸುಗಳನ್ನು ಸಾಕುತ್ತಿರುವ ರೈತರು, ಅವುಗಳ ಆರೋಗ್ಯ ಕಾಪಾಡಲು ಗುಣಮಟ್ಟದ ಪಶು ಆಹಾರವನ್ನೇ ಅವಲಂಬಿಸಿದ್ದಾರೆ. ಕಲಬೆರಕೆ ಕಂಡುಬಂದರೆ ಆರೋಗ್ಯ ಹದಗೆಡು ವ

ಮದ್ಯ ಮಾರಾಟ ನಿಷೇಧ

ಮಡಿಕೇರಿ: ಕೊಡಗು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ದಸರಾ ಹಬ್ಬದ ಪ್ರಯುಕ್ತ ಸಾರ್ವಜನಿಕ ಹಿತಾಸಕ್ತಿಯಿಂದ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಅಬಕಾರಿ ಕಾಯ್ದೆ 1965ರ ಕಲಂ 21 ರಲ್ಲಿ ದತ್ತವಾಗಿರುವ ಅಧಿಕಾರದಂತೆ ಅಕ್ಟೋಬರ್, 20 ರಂದು ಬೆಳಗ್ಗೆ 06 ರಿಂದ ಮಧ್ಯ ರಾತ್ರಿ 12 ಗಂಟೆಯವರೆಗೆ ಸುಂಟಿಕೊಪ್ಪ, 7ನೇ ಹೊಸಕೋಟೆ, ಕಂಬಿಬಾಣೆ ಮತ್ತು ಕೊಡಗರಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯವರೆಗೆ, ಅಕ್ಟೋಬರ್, 21 ರಂದು ಬೆಳಗ್ಗೆ 06 ರಿಂದ ಅಕ್ಟೋಬರ್, 22 ರ ಸಂಜೆ 6 ಗಂಟೆ ವರೆಗೆ ಮಡಿಕೇರಿ ನಗರ ಠಾಣಾ ಸರಹದ್ದಿನ ಸುತ್ತಮುತ್ತ 5 ಕಿ.ಮೀ ವ್ಯಾಪ್ತಿಯಲ್ಲಿ ಹಾಗೂ ಸುಂಟಿಕೊಪ್ಪ, ಕುಶಾಲನಗರ ಹಾಗೂ ಬೆಟ್ಟಗೇರಿ, ಮುರ್ನಾಡು ನಗರ ವ್ಯಾಪ್ತಿಯ ವರೆಗೆ ಹಾಗೂ ಅಕ್ಟೋಬರ್, 21 ರಂದು ಬೆಳಗ್ಗೆ 6 ಗಂಟೆಯಿಂದ ಅಕ್ಟೋಬರ್, 22 ರ ಬೆಳಗ್ಗೆ 10 ಗಂಟೆಯವರೆಗೆ ಗೋಣಿಕೊಪ್ಪ ನಗರ ಹಾಗೂ ಅದರ ಸುತ್ತಮುತ್ತಲಿನ 10 ಕಿ.ಮೀ ವ್ಯಾಪ್ತಿಯಲ್ಲಿ ಹಾಗೂ ಪೊನ್ನಂಪೇಟೆ ತಾಲ್ಲೂಕಿನಾದ್ಯಂತ ಮತ್ತು ವಿರಾಜಪೇಟೆ ಗ್ರಾಮಾಂತರ ಠಾಣಾ ಸರಹದ್ದಿನ ಅಮ್ಮತ್ತಿ, ಬಿಟ್ಟಂಗಾಲ, ಸಿದ್ಧಾಪುರ ಠಾಣಾ ವ್ಯಾಪ್ತಿ, ಪಾಲಿಬೆಟ್ಟ ವ್ಯಾಪ್ತಿಯ ವರೆಗೆ ಎಲ್ಲಾ ರೀತಿಯ ಮದ್ಯದ ಅಂಗಡಿ, ಬಾರ್, ಹೋಟೆಲ್, ಮತ್ತು ಕ್ಲಬ್‌ಗಳಲ್ಲಿ ಎಲ್ಲಾ ವಿಧದ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಆದೇಶಿಸಿದ್ದಾರೆ.

ಆಯುಧ ಪೂಜೆ ಹಾಗೂ ದಸರಾ ಹಬ್ಬ: ವಾಹನ ಸಂಚಾರದ ವ್ಯವಸ್ಥೆಯಲ್ಲಿ ಮಾರ್ಪಾಡು

ಮಡಿಕೇರಿ: ಅಕ್ಟೋಬರ್, 20 ರಂದು ನಡೆಯಲಿರುವ ಆಯುಧ ಪೂಜೆ ಹಾಗೂ ಅಕ್ಟೋಬರ್, 21 ರಂದು ನಡೆಯಲಿರುವ ದಸರಾ ನಾಡಹಬ್ಬದ ದಿನಗಳಂದು ಮಡಿಕೇರಿ ನಗರದಲ್ಲಿ ವಾಹನ ಸಂಚಾರದ ದಟ್ಟಣೆ ಹೆಚ್ಚಾಗಿರುವುದರಿಂದ ವಾಹನ ಸಂಚಾರ, ನಿಲುಗಡೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಅಕ್ಟೋಬರ್, 20 ರಿಂದ ಅಕ್ಟೋಬರ್, 22 ರವರೆಗೆ ಮಡಿಕೇರಿ ನಗರದಲ್ಲಿ ವಾಹನ ಸಂಚಾರದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲಾಗಿದೆ.

2026 ರ ಸಾಲಿನ ನಾಡ ಹಬ್ಬ ದಸರಾ ಉತ್ಸವ ಶಾಂತ ರೀತಿಯಿಂದ ನಡೆಯುವ ಸಲುವಾಗಿ ಸಂಚಾರ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಮುಂಜಾಗ್ರತ ಕ್ರಮವಾಗಿ ಜಿಲ್ಲಾಧಿಕಾರಿ ಅವರ ಆದೇಶದಂತೆ ಮಡಿಕೇರಿ ನಗರದಲ್ಲಿ ವಾಹನ ಸಂಚಾರಗಳ ಮಾರ್ಗ ಬದಲಾವಣೆ ಮತ್ತು ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಅಕ್ಟೋಬರ್, 21 ರಂದು ಸಂಜೆ 4 ಗಂಟೆಯಿಂದ ಅಕ್ಟೋಬರ್, 22 ರ ಬೆಳಗ್ಗೆ 10 ಗಂಟೆಯವರೆಗೆ ಮಡಿಕೇರಿ ನಗರದ ಒಳಗೆ ಎಲ್ಲಾ ರೀತಿಯ ವಾಹನಗಳ ಪ್ರವೇಶವನ್ನು ನಿಷೇಧಿಸಲಾಗಿದೆ.

ನಗರದೊಳಗೆ ಇರುವ ಎಲ್ಲಾ ರಸ್ತೆಗಳನ್ನು ನಿಲುಗಡೆ ರಹಿತ ರಸ್ತೆಗಳೆಂದು ಪರಿಗಣಿಸಲಾಗಿದೆ. ನಗರದೊಳಗಿನ ಸಾರ್ವಜನಿಕರು ಅಕ್ಟೋಬರ್, 21 ರಂದು ಮಧ್ಯಾಹ್ನ 2 ಗಂಟೆಯಿಂದ ತಮ್ಮ ವಾಹನಗಳನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸದೇ ತಮ್ಮ ಶೆಡ್‌ಗಳಲ್ಲಿ ಅಥವಾ ಹಿಂದೂಸ್ಥಾನಿ ಶಾಲಾ ಆವರಣ, ಸೆಂಟ್‌ಜೋಸೆಫ್ ಶಾಲಾ ಮೈದಾನ, ಹೊಸ ತಾಲ್ಲೂಕು ಕಚೇರಿ ಮೈದಾನ, ಹೊಸ ಖಾಸಗಿ ಬಸ್ಸು ನಿಲ್ದಾಣ ಹಾಗೂ ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣದಲ್ಲಿ ತಾತ್ಕಾಲಿಕವಾಗಿ ನಿಲುಗಡೆಗೊಳಿಸುವುದು.

ಗಣಪತಿ ಬೀದಿ, ಮಹದೇವಪೇಟೆ, ಕಾಲೇಜು ರಸ್ತೆ, ಕೊಹಿನೂರು ರಸ್ತೆಯಲ್ಲಿ ಅಕ್ಟೋಬರ್, 22 ರ ಸಂಝೆ 4 ಗಂಟೆಯವರೆಗೂ ನಿಲುಗಡೆ ರಹಿತ ರಸ್ತೆಗಳೆಂದು ಪರಿಗಣಿಸಲಾಗಿದೆ.

ಕೆಎಸ್‌ಆರ್‌ಟಿಸಿ ಬಸ್ಸುಗಳು ತಾತ್ಕಾಲಿಕವಾಗಿ ಕೆಎಸ್‌ಆರ್‌ಟಿಸಿ ಡಿಪೋ ಮತ್ತು ಆರ್‌ಎಂಸಿ ಯಾರ್ಡ್‌ನ್ನು ಬಸ್ಸು ನಿಲ್ದಾಣವಾಗಿ ಮಾರ್ಪಾಡಿಸಿಕೊಳ್ಳುವುದು ಮತ್ತು ನಗರದೊಳಗೆ ಸಂಚರಿಸದಂತೆ ವ್ಯವಸ್ಥೆ ಮಾಡಿಕೊಳ್ಳುವುದು. ಖಾಸಗಿ ಬಸ್ಸು ನಿಲ್ದಾಣ ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣವನ್ನು ತಾತ್ಕಾಲಿಕವಾಗಿ ನಗರದೊಳಗಿನ ಸಾರ್ವಜನಿಕರಿಗೆ ವಾಹನ ನಿಲ್ಲಿಸಲು ಅನುವು ಮಾಡಿಕೊಡಲಾಗಿದೆ.

ಸೋಮವಾರಪೇಟೆ ಕಡೆಯಿಂದ ಬರುವ ವಾಹನಗಳು ಸಂಪಿಗೆ ಕಟ್ಟೆ ಕಡೆಯಿಂದ ಟೋಟಲ್ ಗ್ಯಾಸ್ ಪಕ್ಕದಲ್ಲಿರುವ ಸತೀಶ ಅವರ ಖಾಲಿ ಜಾಗದಲ್ಲಿ, ಎವಿಶಾಲೆ, ಮುತ್ತಪ್ಪ ದೇವಸ್ಥಾನ ಮುಂದೆ ಸೆಂಟ್ ಜೋಸೆಫ್ ಕಾನ್ವೆಂಟ್ ಮೈದಾನ, ತಾಲ್ಲೂಕು ಕಚೇರಿ ಮೈದಾನದಲ್ಲಿ ವಾಹನ ನಿಲುಗಡೆಗೊಳಿಸುವುದು. ಎಸ್‌ಪಿ ಕಚೇರಿ ಜಂಕ್ಷನ್, ಮುಂದೆ ಐಟಿಐ ಜಂಕ್ಷನ್ ಕಡೆಯಿಂದ ಎಫ್‌ಎಂಸಿ ಕಾಲೇಜು ಮೈದಾನದಲ್ಲಿ ವಾಹನಗಳನ್ನು ನಿಲುಗಡೆಗೊಳಿಸುವುದು.

ಮೈಸೂರು ರಸ್ತೆ ಕಡೆಯಿಂದ ದಸರಾಕ್ಕೆ ಬರುವ ವಾಹನಗಳು ಚೈನ್‌ಗೇಟ್ ಮುಖಾಂತರ ತೆರಳಿ ಮ್ಯಾನ್ಸ್ ಕಾಂಪೌಂಡ್ ಮೈದಾನದಲ್ಲಿ ನಿಲುಗಡೆಗೊಳಿಸುವುದು. ಸಿದ್ದಾಪುರದಿಂದ ಬರುವಂತಹ ವಾಹನಗಳು ಕೊಡಗು ವಿದ್ಯಾಲಯದ ಆವರಣದಲ್ಲಿ ಹಾಗೂ ಮೈಸೂರಿನಿಂದ ಬರುವಂತಹ ಲಘುವಾಹನಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಚೇರಿಯ ಎದುರು ಭಾಗದಲ್ಲಿರುವಂತಹ ಕಾರ್ಯಪ್ಪ ಅವರ ಖಾಲಿ ಜಾಗದಲ್ಲಿ ನಿಲುಗಡೆಗೊಳಿಸುವುದು.

ವಿರಾಜಪೇಟೆ, ಮೂರ್ನಾಡು ಕಡೆಯಿಂದ ದಸರಾಕ್ಕೆ ಬರುವ ವಾಹನಗಳು ಮೇಕೇರಿ ಶಾಲಾ ಮೈದಾನದಲ್ಲಿ, ಅತಿರ ರೆಸಾರ್ಟ್, ಶರೀನ್ ಅವರ ಕ್ರಶರ್ ಜಾಗದಲ್ಲಿ ನಿಲುಗಡೆಗೊಳಿಸುವುದು.

ಮಂಗಳೂರು ಕಡೆಯಿಂದ ದಸರಾಕ್ಕೆ ಬರುವ ವಾಹನಗಳು ತಾಳತ್ ಮನೆ ನೇತಾಜಿ ಮೈದಾನ, ಸ್ವಾಗತ್ ಕನ್ವೆಷನ್ ಹಾಲ್ ಮೈದಾನದಲ್ಲಿ ಮತ್ತು ದುರ್ಗ ಭಗವತಿ ದೇವಸ್ಥಾನ ಮೈದಾನ, ಅತಿರ ರೆಸಾರ್ಟ್ ಮೈದಾನದಲ್ಲಿ ನಿಲುಗಡೆಗೊಳಿಸುವುದು.

ಗಾಳಿಬೀಡು ಅಬ್ಬಿಪಾಲ್ಸ್, ಕಾಲೂರು ಕಡೆಯಿಂದ ಬರುವ ವಾಹನಗಳು ಎಫ್‌ಎಂಸಿ ಕಾಲೇಜು ಮೈದಾನದಲ್ಲಿ ನಿಲುಗಡೆಗೊಳಿಸುವುದು. ಭಾಗಮಂಡಲ ಕಡೆಯಿಂದ ದಸರಾಕ್ಕೆ ಬರುವ ವಾಹನಗಳು ತಾಳತ್‌ಮನೆ ದುರ್ಗ ಭಗವತಿ ದೇವಸ್ಥಾನ ಮೈದಾನದಲ್ಲಿ, ಸ್ವಾಗತ್ ಕನ್ವೆನಷನ್ ಹಾಲ್ ಮೈದಾನದಲ್ಲಿ ನಿಲುಗಡೆಗೊಳಿಸುವುದು.

ಮೈಸೂರು, ಸಿದ್ದಾಪುರ ಕಡೆಯಿಂದ ಬರುವ ದ್ವಿಚಕ್ರ ವಾಹನಗಳ ನಿಲುಗಡೆಗೆ ಅರಣ್ಯ ಭವನದ ಆವರಣ, ಕೊಡಗು ವಿದ್ಯಾಲಯದ ಮೈದಾನ, ಮೈಸೂರು ರಸ್ತೆಯ ಈಸ್ಟ್ ಎಂಡ್ ಹೋಟೆಲ್ ಮುಂಭಾಗದಲ್ಲಿರುವ ಶಾಂತಿ ಚರ್ಚ್ ಮೈದಾನದಲ್ಲಿ ನಿಲುಗಡೆ ಮಾಡುವುದು. ಖಾಸಗಿ ಬಸ್ಸುಗಳು ನಗರದೊಳಗೆ ಆಗಮಿಸದೇ ಜಿಟಿ ವೃತ್ತದಲ್ಲಿಯೇ ಪ್ರಯಾಣಿಕರನ್ನು ಇಳಿಸಿ, ಹತ್ತಿಸಿ ಆರ್‌ಎಂಸಿ ಯಾರ್ಡ್‌ನಲ್ಲಿ ನಿಲುಗಡೆಗೊಳಿಸಬೇಕು ಎಂದು ಸಂಚಾರಿ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು ತಿಳಿಸಿದ್ದಾರೆ.

ಅ.23 ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದೊಂದಿಗೆ ಅಕ್ಟೋಬರ್, 23 ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮ ನಡೆಯಲಿದೆ. ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಪಿ.ಎಂ.ನರೇಂದ್ರ ಸ್ವಾಮಿ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್ ಗೌಡ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯರಾದ ಅಜಯ್ ಮಾಕನ್, ವಿಧಾನ ಪರಿಷತ್ ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ಮಡಿಕೇರಿ ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ತೀತಿರ ಧರ್ಮಜ ಉತ್ತಪ್ಪ, ಕೊಡಗು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಕೊಡಗು ಜಿಲ್ಲಾ ಮಹಿಳಾ ಬರಹಗಾರರ ಸಂಘದ ಅಧ್ಯಕ್ಷರಾದ ಪುದಿಯನೆರವನ ರೇವತಿ ರಮೇಶ್, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ.ಸಿಇಒ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಸಹನ ಎಸ್.ಹಾದಿಮನಿ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕುಮಾರ ಇತರರು ಪಾಲ್ಗೊಳ್ಳಲಿದ್ದಾರೆ.

ಮಾಜಿ ಸಿಎಂ ಕುಮಾರಸ್ವಾಮಿ ಪರ ಮಾಜಿ ಶಾಸಕ ಡಾ. ಕೆ. ಅನ್ನದಾನಿ ಬ್ಯಾಟಿಂಗ್

ಮಂಡ್ಯ: ದಲಿತ ಸಂಘಟನೆಗಳ ಮುಖಂಡರು ಮತ್ತಿತರರು ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ನಡೆಸಿರುವ ಪ್ರತಿಭಟನೆಯನ್ನು ಖಂಡಿಸಿದರಲ್ಲದೇ ಮತ್ತು ಕುಮಾರಸ್ವಾಮಿ ಅವರು ಪರಿಶಿಷ್ಟ ಜನಾಂಗದವರಿಗೆ ಮಾಡಿರುವ ಸಾಲು ಸಾಲು ಯೋಜನೆಗಳು, ಕಾರ್ಯಕ್ರಮಗಳನ್ನು ಉದಾಹರಿಸಿ ಮಾಜಿ ಶಾಸಕ ಡಾ. ಕೆ. ಅನ್ನದಾನಿ ಮಾಜಿ ಸಿಎಂ ಕುಮಾರಸ್ವಾಮಿ ಪರವಾಗಿ ಸೋಮವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಬ್ಯಾಟಿಂಗ್ ಮಾಡಿದರಲ್ಲದೇ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ರಾಕೇಶ್ ಶೆಟ್ಟಿ ಯವರ ಹೇಳಿಕೆಗಳನ್ನು ಖಂಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್, ಬಿಡದಿ ಟೌನ್‌ಶಿಪ್, ನೈಸ್ ರೋಡ್ ಹಾಗೂ ಕೆಪಿಎಸ್‌ಸಿ ಹಗರಣಗಳ ಬಗ್ಗೆ ಕುಮಾರಸ್ವಾಮಿ ಅವರು ಸರ್ಕಾರಕ್ಕೆ ಅನೇಕ ಪ್ರಶ್ನೆಗಳನ್ನು ಮತ್ತು ಆಕ್ಷೇಪಣೆಗಳನ್ನು ಎತ್ತಿದ್ದರೂ, ಮುಖ್ಯಮಂತ್ರಿಯಾಗಲಿ, ಸಚಿವರಾಗಲಿ ಯಾರೂ ಕೂಡ ಅದಕ್ಕೆ ಸಮರ್ಪಕವಾದ ಉತ್ತರವನ್ನು ನೀಡಿಲ್ಲ ಎಂದು ಡಾ. ಅನ್ನದಾನಿ ಆರೋಪಿಸಿದರು.

ಪ್ರಿಯಾಂಕ್ ಖರ್ಗೆ ಹೇಳಿಕೆಗೆ ತೀವ್ರ ಆಕ್ಷೇಪ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಟೀಕೆಗಳ ಹಿಂದಿನ ಅರ್ಥವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ದಲಿತ ಸಮುದಾಯದ ಬಗ್ಗೆ ಕಾಳಜಿ ಹೊಂದಿರುವ ಕುಮಾರಸ್ವಾಮಿ ಅವರನ್ನು ಟೀಕಿಸುವ ಮೊದಲು, ಅವರು ದಲಿತರ ಅಭಿವೃದ್ಧಿಗೆ ನೀಡಿರುವ ಕೊಡುಗೆಗಳನ್ನು ಗಮನಿಸಬೇಕು ಎಂದು ಒತ್ತಾಯಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರು ಕುಮಾರಸ್ವಾಮಿ ಅವರ ವಿರುದ್ಧ ಹಗುರವಾಗಿ ಮತ್ತು ಉದ್ಧಟತನದಿಂದ ಮಾತನಾಡಿರುವುದನ್ನು ಅವರು ತೀವ್ರವಾಗಿ ಖಂಡಿಸಿದರು. ಕುಮಾರಸ್ವಾಮಿ ಅವರು ದಲಿತರ ಪರವಾಗಿ ಅನೇಕ ಕೆಲಸಗಳನ್ನು ಮಾಡಿದ್ದರೂ, ಪ್ರಿಯಾಂಕ್ ಖರ್ಗೆ ಅವರು ತಮ್ಮ ಜವಾಬ್ದಾರಿಯನ್ನು ಮರೆತು ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ಕುಮಾರಸ್ವಾಮಿ ಅವರ ದಲಿತಪರ ಕಾಳಜಿ: ಕುಮಾರಸ್ವಾಮಿ ಅವರು ತಮ್ಮ ಅಡಳಿತಾವಧಿಯಲ್ಲಿ ದಲಿತರ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ದಲಿತರ ಕಾಲೋನಿಗಳಿಗೆ ಸಿಮೆಂಟ್ ರಸ್ತೆಗಳನ್ನು ಹಾಕಿಸುವ 'ಸ್ವರ್ಣ ಗ್ರಾಮ' ಯೋಜನೆಗೆ ಚಾಲನೆ ನೀಡಿದ್ದೇ ಕುಮಾರಸ್ವಾಮಿ ಎಂದು ಡಾ. ಅನ್ನದಾನಿ ತಿಳಿಸಿದರು. ಆದರೆ ಪ್ರಿಯಾಂಕ್ ಖರ್ಗೆ ಮತ್ತು ಕಾಂಗ್ರೆಸ್ ನಾಯಕರು ದಲಿತರಿಗೆ ಮೋಸ ಮಾಡಿದ್ದಾರೆ ಎಂದು ದೂರಿದರು.

ದಲಿತರ ಹಣ ಅನ್ಯಾಯಕ್ಕೆ ಬಳಕೆ: ಎಸ್‌ಸಿಪಿ/ಟಿಎಸ್‌ಪಿ ಅನುದಾನದ ಕೋಟ್ಯಂತರ ಹಣವನ್ನು ಬೇರೆ ಕಡೆಗೆ ಡೈವರ್ಟ್ ಮಾಡಿಕೊಂಡು ದಲಿತರಿಗೆ ಅನ್ಯಾಯ ಮಾಡಲಾಗುತ್ತಿದ್ದರೂ, ಇದರ ಬಗ್ಗೆ ಪ್ರಶ್ನಿಸಬೇಕಾದವರು ಮೌನ ವಹಿಸಿದ್ದಾರೆ ಎಂದು ಅವರು ಆರೋಪಿಸಿದರು.

ದಲಿತರು ಸೂಟು-ಬೂಟ್ ಧರಿಸಬಾರದು ಅಥವಾ ಉನ್ನತ ಹುದ್ದೆಗಳನ್ನು ಅಲಂಕರಿಸಬಾರದು ಎಂದು ಕುಮಾರಸ್ವಾಮಿ ಅವರು ಹೇಳಿಲ್ಲ. ಬದಲಾಗಿ, ಈಗಾಗಲೇ ಅಭಿವೃದ್ಧಿ ಹೊಂದಿರುವವರು ತಮ್ಮ ಸಮುದಾಯದ ಬಡವರನ್ನು ಮೇಲಕ್ಕೆತ್ತುವ ಕೆಲಸ ಮಾಡಬೇಕೆಂಬ ಅರ್ಥದಲ್ಲಿ ಬಲಿತ-ದಲಿತ ಪದವನ್ನು ಬಳಸಿದ್ದಾರೆಯೇ ವಿನಃ ಇದರಲ್ಲಿ ಯಾವುದೇ ತಪ್ಪು ಅರ್ಥವಿಲ್ಲ. ಅವರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿ ವಿವಾದ ಸೃಷ್ಟಿಸುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಅಂಬೇಡ್ಕರ್ ವಿಚಾರಧಾರೆ: ಕಾಂಗ್ರೆಸ್ ಪಕ್ಷವು ಅಂಬೇಡ್ಕರ್ ಅವರಿಗೆ ಹಾಗೂ ದಲಿತರಿಗೆ ಯಾವಾಗಲೂ ಮೋಸ ಮಾಡಿಕೊಂಡು ಬಂದಿದೆ ಎಂದು ಟೀಕಿಸಿದ ಅವರು, ಕುಮಾರಸ್ವಾಮಿ ಅವರು ದಲಿತರ ಪರವಾಗಿ ತೆಗೆದುಕೊಂಡಿರುವ ನಿರ್ಧಾರಗಳು ಮತ್ತು ಕಲ್ಯಾಣ ಕಾರ್ಯಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿದರು.

ರಾಕೇಶ್ ಶೆಟ್ಟಿ ಹೇಳಿಕೆಗೆ ತಿರುಗೇಟು: ರಾಕೇಶ್ ಶೆಟ್ಟಿ ಸೇರಿದಂತೆ ಕೆಲವರು ನೀಡಿರುವ ಹೇಳಿಕೆಗಳನ್ನು ಖಂಡಿಸಿದ ಅವರು, ರಾಜಕೀಯವಾಗಿ ಮಾತನಾಡುವಾಗ ಘನತೆಯನ್ನು ಕಾಪಾಡಿಕೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಂತಹ ಹಿರಿಯ ಮತ್ತು ಪ್ರಭಾವಿ ನಾಯಕರಿಗೆ ಸ್ಟಿಂಗ್ ಆಪರೇಷನ್ ಅಥವಾ ಇತರೆ ಆರೋಪಗಳೊಂದಿಗೆ ತಳಕು ಹಾಕುವುದು ಸರಿಯಲ್ಲ, ಎಂಟು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಬಡವರ ಪರವಾದ ಹಲವು ಯೋಜನೆಗಳನ್ನು ಜಾರಿಗೆ ತಂದು ಕಾಂಗ್ರೆಸ್ ಪಕ್ಷಕ್ಕೆ ಜೀವ ತುಂಬಿದ್ದಾರೆ. ಅಂತಹವರ ವಿರುದ್ಧ ಸ್ಟಿಂಗ್ ಆಪರೇಷನ್ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ರಾಕೇಶ್ ಶೆಟ್ಟಿ ಅವರು ಟಿವಿ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಕುಳಿತು ಬೇಜವಾಬ್ದಾರಿಯಿಂದ ಮಾತನಾಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದಲ್ಲಿ ಅವರ ವಿರುದ್ಧವೂ ಸೂಕ್ತ ರೀತಿಯಲ್ಲಿ ಹೋರಾಟ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಜಾ.ದಳ ಎಸ್/ಎಸ್ಟಿ ಘಟಕದ ಅಧ್ಯಕ್ಷ ಸಾತನೂರು ಜಯರಾಂ, ಉಪಾಧ್ಯಕ್ಷ ಭದ್ರಾಚಲಮೂರ್ತಿ,ವಿವಿಧ ತಾಲೂಕು ಘಟಕಗಳ ಮುಖಂಡರಾದ ಕಾಂತರಾಜು, ಬೊಮ್ಮರಾಜು, ನರಸಿಂಹ, ಸಂತೋಷ್, ಕಾಳಪ್ಪ, ಶಂಕರ್ ಉಪಸ್ಥಿತರಿದ್ದರು.

ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ ರೂ.5600 ಸಾವಿರ ರೂ. ನೀಡಿ-ರಾಷ್ಟ್ರೀಯ ಸಕ್ಕರೆ ನೀತಿ ಜಾರಿಗೆ ಆಗ್ರಹ

ಅ.23 ರಂದು ರಾಷ್ಟ್ರೀಯ ಹೆದ್ದಾರಿ ಬಂದ್

ಮಂಡ್ಯ: ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವ ಕಬ್ಬು ಬೆಳೆಗಾರರ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಎಚ್ಚರಿಸಲು ಅ.23 ರಂದು ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರ ಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ ಹಾಗೂ ಕರ್ನಾಟಕ ರಾಜ್ಯಗಳಲ್ಲಿ ಕಬ್ಬು ಬೆಳೆಗಾರ

ಸಡಗರದ ಜಂಬೂ ಸವಾರಿಯ ಗಜಪಡೆಗಳ ವೈಭವ

ಡಾ. ಆರ್ ಶೈಲಜ ಶರ್ಮ, ಬೆಂಗಳೂರು.

ನವರಾತ್ರಿಯಲ್ಲಿ ಪ್ರತಿ ದಿನ ಒಂದೊಂದು ದೇವಿಯ ಸಡಗರದೊಂದಿಗೆ ಕಳೆಕಟ್ಟಿದರೆ, ವಿಜಯದಶಮಿಯ ದಿನದ ಪ್ರಮುಖ ಆಕರ್ಷಣೆ "ಜಂಬೂಸವಾರಿ" ಯಾಗಿರುತ್ತದೆ. ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿಯಲ್ಲಿ ನಾಡ ದೇವತೆ ಅಂಬಾರಿಯಲ್ಲಿ 'ಶ್ರೀಚಾಮುಂಡೇಶ್ವರಿಯ ಮೂರ್ತಿ'ಯನ್ನು ಹೊತ್ತು ಸಾಗುವ ಅದೃಷ್ಟ ಪ್ರಶಾಂತ ಆನೆಗೆ ದೊರೆತಿದೆ. ಹೆಸರಿಗೆ ತಕ್ಕಂತೆ ಶಾಂತ ಸ್ವಭಾವವನ್ನು ಹೊಂದಿರುವ ಪ್ರಶಾಂತ ಆನೆ. ಸತತವಾಗಿ 18 ವರ್ಷಗಳಿಂದಲೂ ಜಂಬೂಸವಾರಿಯಲ್ಲಿ ಪಾಲ್ಗೊಳ್ಳುತ್ತಿದೆ. ಈ ಬಾರಿ ಅಂಬಾರಿ ಹೊರುತ್ತಿದೆ. ಅಂಬಾರಿ ಹೊರುತ್ತಿರುವ 13ನೇ ಆನೆ ಇದಾಗಿದೆ.

ನಮ್ಮ ನಾಡಿನವರಲ್ಲದೆ ಹೊರ ರಾಜ್ಯ ಹಾಗೂ ದೇಶ, ವಿದೇಶಗಳಿಂದಲೂ ಜನರು ಜಂಬೂಸವಾರಿ ವೀಕ್ಷಣೆಗಾಗಿ ಸಾಗರೋಪಾದಿಯಲ್ಲಿ ಸೇರುತ್ತಾರೆ. ಇಡೀ ಮೈಸೂರು ನಗರವೇ ದಸರಾ ಉತ್ಸವಕ್ಕೆ ಸಿಂಗರಿಸಿಕೊಳ್ಳುತ್ತವೆ. ಜಂಬೂಸವಾರಿ ಸಾಗುವ ರಾಜಮಾರ್ಗವಲ್ಲದೇ ನಗರದ ಪ್ರಮುಖ ರಸ್ತೆಗಳು ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತವೆ. ಮೈಸೂರು ನಗರವೇ ವಿಶೇಷ ರಂಗಿನಿಂದ ಕೂಡಿರುತ್ತವೆ.

ಐತಿಹ್ಯ– ಕ್ರಿ.ಶ. 1640ರಲ್ಲಿ ಶ್ರೀರಂಗಪಟ್ಟಣದಲ್ಲಿ ರಾಜ ಒಡೆಯರ್ ಅವರಿಂದ ಆರಂಭವಾದದ್ದು ಜಂಬೂ ಸವಾರಿ. ಐತಿಹಾಸಿಕ ದಸರಾ ಉತ್ಸವದಲ್ಲಿ ಮೈಸೂರು ಮಹಾರಾಜರ ಕುಲದೇವತೆ, "ಕರುನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿಯ" ಮಹಾ ಮೆರವಣಿಗೆ ಜರುಗುತ್ತದೆ. ಜಂಬೂಸವಾರಿ ಶುಭ ಲಗ್ನದಲ್ಲಿ "ಅರಮನೆಯ ಬಲರಾಮ ದ್ವಾರ"ದಲ್ಲಿ ನಂದಿಧ್ವಜಕ್ಕೆ ಪೂಜೆ ಮಾಡುವ ಮೂಲಕ ಆರಂಭವಾಗುತ್ತದೆ. ಚಿನ್ನದ ಅಂಬಾರಿಯಲ್ಲಿ ವಿರಾಜಮಾನರಾಗಿರುವ ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ. 14 ಕುಶಾಲ ತೋಪುಗಳ ಗೌರವ. ನಂತರದಲ್ಲಿ ಅರಮನೆ ಒಳಾವರಣದಲ್ಲಿ ವಿಜಯದಶಮಿಯ ಅತ್ಯಾಕರ್ಷಕ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ಜಂಬೂಸವಾರಿ

ಅರಮನೆ ಆವರಣದಿಂದ ಬನ್ನಿ ಮಂಟಪದವರೆಗೆ ಸಾಗುತ್ತದೆ. ಅಂಬಾರಿ ಹೊತ್ತ ಜಂಬೂಸವಾರಿ ಜತೆ ಪೊಲೀಸ್ ಬ್ಯಾಂಡ್ನ ಆಕರ್ಷಕ ತಾಳವಾದ್ಯ, ಕಂಸಾಳೆ ಕುಣಿತದ ಮೈನವಿರೇಳಿಸುವ ದೃಶ್ಯ ಹಾಗೂ ಕಲಾತಂಡಗಳ ಮನಮೋಹಕ ನೃತ್ಯ, ಮೋಹಕ ಸ್ತಬ್ಧ ಚಿತ್ರಗಳು ಹಾಗೂ ಇನ್ನೂ ಮುಂತಾದವು ದಸರಾ ಜಂಬೂಸವಾರಿ ಮೆರವಣಿಗೆಯ ಆಕರ್ಷಣೆಗಳು. 'ದೇವಿ ಚಾಮುಂಡೇಶ್ವರಿ ಮೂರ್ತಿ'ಯು 750ಕೆಜಿ ಚಿನ್ನದ ಅಂಬಾರಿಯಲ್ಲಿ ಅತ್ಯಾಕರ್ಷಕವಾಗಿರುತ್ತದೆ. ವೈಭವದಿಂದ ಮೆರವಣಿಗೆ ಜರುಗುತ್ತದೆ.

ಗಜಪಡೆ – ಈ ಬಾರಿಯ ದಸರಾ ಜಂಬೂ ಸವಾರಿಯಲ್ಲಿ "ಪ್ರಶಾಂತ" ಆನೆಯ ನೇತೃತ್ವದಲ್ಲಿ ಇನ್ನಿತರ ಆನೆಗಳು ಪಾಲ್ಗೊಳ್ಳುತ್ತವೆ. ಆನೆಗಳೇ ಮೈಸೂರು ದಸರಾದ ಪ್ರಮುಖ ಆಕರ್ಷಣೆ. ಜೊತೆಗೆ ಜಂಬೂ ಸವಾರಿಯ ರೂವಾರಿಗಳೂ ಆಗಿರುತ್ತವೆ. ಆನೆಗಳಿಲ್ಲದ ದಸರಾವನ್ನು ಊಹಿಸಲೂ ಸಾಧ್ಯವಿಲ್ಲ. ದಸರಾಗೆ ಒಂದು ಅಥವಾ ಎರಡು ತಿಂಗಳ ಮುಂಚೆ ವಿವಿಧ ಆನೆ ಶಿಬಿರಗಳಿಂದ ಎರಡು ತಂಡವಾಗಿ ಆಗಮಿಸುವ ಗಜಪಡೆ, ಕಾಡಿನಿಂದ ನಗರ ಪ್ರವೇಶಿಸುತ್ತಿದ್ದಂತೆಯೇ ಮೈಸೂರಿಗೆ ದಸರಾ ಕಳೆ ಬಂದು ಬಿಡುತ್ತದೆ. ಹಿಂದೆ ಅಂಬಾರಿ ಹೊರುತ್ತಿದ್ದ ಅಭಿಮನ್ಯು ಈಗ ಅತಿಥಿಯಂತೆ ಬಂದಿರುವುದು ಸಮಾಧಾನಕರವಾಗಿದೆ. ಪ್ರಶಾಂತ ಆನೆಯ ವಯಸ್ಸು ಸುಮಾರು 54 ವರ್ಷ, ಎತ್ತರ 2.61 ಮೀಟರ್, ಉದ್ದ 3.46 ಮೀಟರ್. ತೂಕ ಸುಮಾರು 5205 ಕೆ.ಜಿ. ಇದರ ಸ್ಥಿರ ವಾಸ್ತವ್ಯ/ಇರುವುದು 'ದುಬಾರೆ ಆನೆ ಶಿಬಿರ'ದಲ್ಲಿ. ಇದನ್ನು 1993ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾರೆ ಕೊಪ್ಪ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿತ್ತು.

ಈ ಬಾರಿಯ ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಗಜ ಪಡೆಗಳು:

- ನಿಶಾನೆ ಆನೆ "ಅಭಿಮನ್ಯು" ಜಂಬೂ ಸವಾರಿಯನ್ನು ಮುನ್ನಡೆಸುವ ನಾಯಕ.
- ಮೀಸಲು ಅಂಬಾರಿ ಆನೆ ಹೊರುವುದು 'ಧನಂಜಯ'. (ಪ್ರಶಾಂತ ಆನೆಯ ಜೊತೆಗೆ ತುರ್ತು ಸಂದರ್ಭದಲ್ಲಿ ಜೊತೆಗೆ ಇರುವುದು.)
- ನೌಪತ್ ಆನೆ "ಗೋಪಿ' (ರಾಜಮನೆತನದ ಸಂಪ್ರದಾಯದ ಪ್ರಕಾರ, ಜಂಬೂಸವಾರಿಯ ಮೆರವಣಿಗೆಯಲ್ಲಿ ರಾಜಮಂಡಲದ ನಗಾರಿ/ನೌಪತ್ ಗಾಡಿಯನ್ನು ಎಳೆಯುವ/ಹೊತ್ತು ಸಾಗುವ ಆನೆಯನ್ನು 'ನೌಪತ್ ಆನೆ' ಎಂದು ಕರೆಯಲಾಗುತ್ತದೆ. ಇದು ಮೆರವಣಿಗೆಯ ಮುಂಚೂಣಿಯಲ್ಲಿ ಸಾಗುತ್ತಾ, ಗಾಂಭೀರ್ಯದ ವಾತಾವರಣವನ್ನು ಸೃಷ್ಟಿಸುತ್ತದೆ. 43 ವರ್ಷದ ಗೋಪಿ ಕಳೆದ ವರ್ಷವೂ ಸಹ ನೌಪತ್ ಆನೆಯಾಗಿ ಯಶಸ್ವಿಯಾಗಿ ಹೆಜ್ಜೆ ಹಾಕಿತ್ತು.
- ಕುಮ್ಕಿ ಆನೆಗಳು 'ಕಾವೇರಿ ಮತ್ತು ರೂಪ (ಕುಮ್ಕಿ ಎಂದರೆ ಪಳಗಿರುವ ಆನೆಗಳು. ಅಂಬಾರಿ ಹೊರುವ ಪ್ರಶಾಂತನ ಅಕ್ಕಪಕ್ಕದಲ್ಲಿ ಇವು ಗಾಂಭೀರ್ಯದಿಂದ ಹೆಜ್ಜೆ ಹಾಕುತ್ತವೆ. ಇವು ಪುಂಡಾಟದ ಆನೆಗಳನ್ನೂ ಸಹ ಸೆರೆಹಿಡಿಯುವಲ್ಲಿಯೂ ಮುಖ್ಯ ಪಾತ್ರವಹಿಸುತ್ತವೆ.)
- ಸಾಲಾನೆಗಳಾಗಿ 'ಏಕಲವ್ಯ, ಸುಗ್ರೀವ, ಲಕ್ಷ್ಮೀ, ಶ್ರೀಕಂಠ, ಶ್ರೀರಾಮ ಮತ್ತು ಮಹೇಂದ್ರ ಗಜಪಡೆಗಳು.

"ಅಂಬಾರಿ ಹೊರುವ ಗಜರಾಜನಿಗೆ ವಿಶೇಷ ಅಲಂಕಾರ"

ದಸರಾದ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆಯಲ್ಲಂತೂ ರಾಜಗಂಭೀರದಲ್ಲಿ ನಡೆಯುವ ಆನೆಯ ನಾಲ್ಕೂ ಕಾಲುಗಳಿಗೆ ಪಂಚಲೋಹದ ಕಾಲಂದಿಗೆ ಹಾಕುತ್ತಾರೆ. ಕೊಂಬಿನ ತುದಿಗೆ ಹೂವಿನ ಹಾರ, ಮುತ್ತಿನ ಸರವನ್ನು ತೊಡಿಸಲಾಗುವುದು. ದಂತದ ತುದಿಗೆ ಸಿಂಗೋಟಿ, ಕತ್ತಿಗೆ ಮಾವಿನ ಸರ, ಗಂಟೆ ಸರ, ಕಿವಿಗೆ ಚಾಮರ, ಪಂಚಲೋಹದ ಅಂಕುಶಗಳಿಂದ ಅಲಂಕಾರ ಭೂಷಿತನಾಗುತ್ತದೆ. ಕೊರಳು ಮತ್ತು ಬೆನ್ನಿನ ಮೇಲಿಂದ ಎರಡೂ ಕಡೆ ಜೋತು ಬಿದ್ದು ತೂಗಾಡುವ ಉದ್ದದ ಸರಪಳಿಗೆ ಕಟ್ಟಿದ ಸಾಲುಸಾಲು ಗಂಟೆಗಳ ಕಿಣಿಕಿಣಿ ನಾದ, ಸೊಂಡಿಲ ಮೇಲಿನ ವಿಶಾಲವಾದ ಹಣೆಯನ್ನು ಮುಚ್ಚಿದ ಉಬ್ಬಿದ ಗುಬ್ಬಿಗಳಿರುವ ಚಿನ್ನದ ಬಣ್ಣದ ಪಟ್ಟಿ, ಕಣ್ಣಿನ ಸುತ್ತ, ಕೆನ್ನೆ, ಕಿವಿ, ಸೊಂಡಿಲು, ಬಾಲದಲ್ಲೂ ಚಿತ್ತಾರ ಬಿಡಿಸಿಕೊಂಡು ಆಕರ್ಷಕವಾಗಿ ಕಾಣಿಸುತ್ತದೆ. ಆನೆಯು ಸಿಂಗಾರಗೊಂಡು ತಯಾರಾಗುತ್ತದೆ. ಪ್ರಶಾಂತನೊಂದಿಗೆ ಸಾಗುವ ಆನೆಗಳಿಗೂ ಸಹ ಅಲಂಕಾರಗಳನ್ನು ಮಾಡಿರುತ್ತಾರೆ. ದಸರಾದ ಜಂಬೂ ಸವಾರಿಯಲ್ಲಿ ಬಲರಾಮ, ಅರ್ಜುನರ ನೆನಪು ಬಂದೇ ಬರುತ್ತದೆ.

ಗಜಪಡೆಗಳು ಜನರೊಂದಿಗೆ ರಾಜ ಗಾಂಭೀರ್ಯದಿಂದ ಅರಮನೆಯಿಂದ ಹೊರಟು ಕೆ. ಆರ್. ವೃತ್ತ, ಸಯ್ಯಾಜಿ ರಾವ್ ರಸ್ತೆ ಮೂಲಕ ಬನ್ನಿ ಮಂಟಪದ ಕಡೆಗೆ ಚಿನ್ನದ ಅಂಬಾರಿ ಹೊತ್ತು ಸಾಗುವ ದೃಶ್ಯ ಮನಸೂರೆಗೊಳ್ಳುತ್ತದೆ. ಈ ದಾರಿಯಲ್ಲಿ ಸಾಗಿ ಬಂದು ಬನ್ನಿ ಮಂಟಪ ಸೇರುತ್ತದೆ. ನಂತರದ ಪೂಜೆಯ ವಿಧಾನಗಳನ್ನು ಪೂರೈಸಿ, ಬನ್ನಿ ಕಡಿದು. ಬನ್ನಿ ಹಂಚಿ ಸಂಭ್ರಮಿಸಿ ತೆರಳುತ್ತಾರೆ.

ನವರಾತ್ರಿ ಸಂಜೆಯಲಿ... ದೇವಿಸ್ತುತಿ ಮನದಲ್ಲಿ.....

ಕಾವೇರಿ ಭಾರದ್ವಾಜ್

"ದಸರಾ ದಸರಾ ದಸರಾ ಬಂತಮ್ಮ....", "ಮೈಸೂರು ದಸರಾ ಎಷ್ಟೊಂದು ಸುಂದರ", ಹೀಗೆ ನಾಡಹಬ್ಬ ದಸರೆಯ ಕುರಿತಾಗಿ ಅದೆಷ್ಟೋ ಹಾಡುಗಳಿವೆ. ಹತ್ತು ದಿನದ ಹಬ್ಬ, ಹೆಣ್ಣು ಮಕ್ಕಳು ಬಹಳ ಸಡಗರ, ಸಂಭ್ರಮ, ಶ್ರದ್ಧಾ ಭಕ್ತಿಯಿಂದ ಆಚರಿಸುವ ಹಬ್ಬವಾಗಿದೆ. ದಸರಾ ಹಬ್ಬ ರಾಜ್ಯದ ಹಾಗೂ ದೇಶದ ನಾನಾ ಭಾಗಗಳಲ್ಲಿ ಬೇರೆ ಬೇರೆ ಸಂಪ್ರದಾಯದ ಪ್ರಕಾರ ಆಚರಿಸಲ್ಪಡುತ್ತದೆ. ಮೈಸೂರು ದಸರೆಯಲ್ಲಿ ವಿಶ್ವವಿಖ್ಯಾತ ಜಂಬೂಸವಾರಿಯೇ ಕೇಂದ್ರಬಿಂದು. ಗುಜರಾತಿನ ಗರ್ಬಾ ನೃತ್ಯ ದಸರೆಯ ಮೆರುಗಿನ ಮತ್ತಷ್ಟು ರಂಗು. ಕಲ್ಕತ್ತೆಯಲ್ಲಿ ಕಾಳಿ ಆರಾಧನೆ ವಿಶೇಷವಾದುದು. ಉತ್ತರ ಭಾರತದ ಕೆಲವೆಡೆ ರಾವಣ ದಹನವೇ ವಿಜೃಂಭಣೆಯಿಂದ ನಡೆಯುತ್ತದೆ. ಶೃಂಗೇರಿಯ ನವರಾತ್ರಿ ದರ್ಬಾರ್,ಶಾರದಾ ದೇವಿಯ ಪ್ರತೀ ದಿನದ ಅಲಂಕಾರ ಇನ್ನಷ್ಟು ಸೊಗಸಾಗಿದೆ. ದಸರಾ ಹಬ್ಬ ಕಲೆ, ಸಂಸ್ಕೃತಿ, ಸಾಹಿತ್ಯ, ಸಂಗೀತ, ಸಂಹಾರ, ರಕ್ಷಣೆ, ಧೈರ್ಯ ಮತ್ತು ಸಾಹಸಗಳ ಪ್ರತೀಕವಾಗಿದೆ.

ದಸರಾ ಹಬ್ಬ ನಮ್ಮ ರಾಜ್ಯದ ನಾಡಹಬ್ಬವಾಗಿದೆ. ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಆಚರಿಸುವ ಈ ಹಬ್ಬ ವಿಭಿನ್ನ ಆಚರಣೆ ಮತ್ತು ಸಂಪ್ರದಾಯಗಳನ್ನು ಹೊಂದಿದೆ. ಸೌಮ್ಯ ರೂಪಿಣಿ ಪಾರ್ವತಿ ದೇವಿ ದುಷ್ಟರನ್ನು ತನ್ನ ರೌದ್ರಾವತಾರದ ಮೂಲಕ ರಾಕ್ಷಸರನ್ನು ಸಂಹರಿಸಿ ಶಿಷ್ಟರನ್ನು ಕಾಪಾಡಿದ ಪ್ರತೀತಿಯೇ ನವರಾತ್ರಿ ಆಚರಣೆ. ಈ ಸಂದರ್ಭದಲ್ಲಿ ದೇವಿಯನ್ನು ವಿಧವಿಧವಾದ ಅಲಂಕಾರ, ಹೋಮ, ಪೂಜೆ ವಿಧಿ ವಿಧಾನಗಳಿಂದ ಆರಾಧಿಸಲಾಗುತ್ತದೆ. ಕರಾವಳಿ ಪ್ರಾಂತ್ಯದಲ್ಲಿ ತುಳುನಾಡ ದಸರಾ ಪ್ರಖ್ಯಾತವಾದುದು. ಶಕ್ತಿ ದೇವತೆಯ ತವರೆಂದೇ ಹೇಳುವಷ್ಟೇ ದೇವಿಯ ದೇಗುಲಗಳಿವೆ. ನವರಾತ್ರಿಯ ವೈಭವ ಕರಾವಳಿಯಲ್ಲೂ ವಿಭಿನ್ನ ಹಾಗೂ ವೈಶಿಷ್ಟ್ಯ.

ನವರಾತ್ರಿ ಹೆಸರೇ ಸೂಚಿಸುವಂತೆ ಒಂಭತ್ತು ದಿನ ಸಂಜೆ ಸಮಯದಲ್ಲಿ ದೇವಿಯನ್ನು ಆರಾಧನೆ ಮಾಡುವುದೇ ವಿಶೇಷ. ಮೊದಲನೇ ದಿನ ಶೈಲಪುತ್ರಿ, ಎರಡನೇ ದಿನ ಬ್ರಹ್ಮಚಾರಿಣಿ, ಮೂರನೇ ದಿನ ಚಂದ್ರಘಂಟಾ, ನಾಲ್ಕನೇ ದಿನ ಕೂಷ್ಮಂಡಾ, ಐದನೇ ದಿನ ಸ್ಕಂದಮಾತಾ, ಆರನೇ ದಿನ ಕಾತ್ಯಾಯಿನಿ, ಏಳನೇ ದಿನ ಕಾಲರಾತ್ರಿ, ಎಂಟನೇ ದಿನ ಮಹಾಗೌರಿ ಮತ್ತು ಕೊನೆಯ ಒಂಬತ್ತನೇ ದಿನ ಸಿದ್ಧಿದಾತ್ರೀಯಾಗಿ ಆರಾಧಿಸಲಾಗುತ್ತದೆ. ಈ ಒಂದೊಂದು ದಿನವೂ ದೇವಿಯ ರೂಪ, ಆರಾಧನೆಗಳಲ್ಲಿ ವೈಶಿಷ್ಟ್ಯವಿದೆ. ಧಾರ್ಮಿಕ ಆಚರಣೆಗಳಲ್ಲಿ ವಿವಿಧತೆ ಇದೆ.

ಕನ್ನಿಕಾ ಪೂಜೆ

ಕನ್ನಿಕಾ ಪೂಜೆಯನ್ನು ಕೊಡಗೂಸು ಮುತ್ತೈದೆ ಪೂಜೆ ಎಂದೂ ಕರೆಯಲಾಗುತ್ತದೆ. ಪ್ರೌಢಾವಸ್ಥೆಗೆ ಮುನ್ನ ವಯಸ್ಸಿನ ಹೆಣ್ಣು ಮಕ್ಕಳನ್ನು ಪೂಜಿಸುವ ಪದ್ಧತಿ. ಇದು ಉತ್ತರ ಹಾಗೂ ದಕ್ಷಿಣ ಭಾರತ ಎರಡೂ ಕಡೆಯಲ್ಲೂ ಆಚರಣೆಯಲ್ಲಿದೆ. ಪುಟ್ಟ ಪುಟ್ಟ ಹೆಣ್ಣು ಮಕ್ಕಳನ್ನೇ ದೇವಿಯೆಂದು ಪೂಜಿಸಿ,

ದಕ್ಷಿಣೆ, ಅಲಂಕಾರಿಕ ವಸ್ತುಗಳು ಹಾಗೂ ವಸ್ತ್ರವನ್ನು ನವರಾತ್ರಿಯ ಸಂದರ್ಭದಲ್ಲಿ ನೀಡಲಾಗುತ್ತದೆ.

ಮೈಸೂರು ದಸರಾ

ಮೈಸೂರು ದಸರಾ ವಿಶ್ವವಿಖ್ಯಾತವಾದುದು. ವಿಜಯನಗರ ಸಾಮ್ರಾಜ್ಯದಲ್ಲಿ ಬಹಳ ವೈಭವಯುತವಾಗಿ ಆಚರಿಸುತ್ತಿದ್ದ ನವರಾತ್ರಿಯನ್ನು ಮೈಸೂರು ಸಂಸ್ಥಾನದ ಒಡೆಯರ್ ಮುಂದುವರಿಸಿದರು. ಪ್ರಸ್ತುತ ರಾಜ್ಯ ಸರ್ಕಾರ ಅದನ್ನು ಪರಿಪಾಲಿಸುತ್ತಿದೆ. ಅರಮನೆಯಲ್ಲಿ ಒಂಭತ್ತು ದಿನ ಮಹಾರಾಜರ ಖಾಸಗಿ ದರ್ಬಾರ್, ಸರಸ್ವತೀ ಪೂಜೆ, ಆಯುಧ ಪೂಜೆಗಳನ್ನು ಕಾಣಬಹುದು. ಕೊನೆಯ ದಿನ ಜಂಬೂಸವಾರಿಯೇ ಮೈಸೂರು ದಸರೆಯ ಮುಖ್ಯ ಆಕರ್ಷಣೆ. ಆನೆಯ ಮೇಲೆ ಬಂಗಾರದ ಅಂಬಾರಿಯನ್ನು ಇಟ್ಟು, ಅದರಲ್ಲಿ ಚಾಮುಂಡೇಶ್ವರಿ ಮೂರ್ತಿಯನ್ನು ಮೆರವಣಿಗೆಯ ಮೂಲಕ ಕೊಂಡೊಯ್ಯುವುದೇ ವೈಭವ ಮತ್ತು ಅತ್ಯಂತ ಸುಂದರ.

ಶಮೀ ವೃಕ್ಷದ ಮಹತ್ವ

ದಸರೆಯ ನಂಟು ದೇಶದ ಶ್ರೇಷ್ಠ ಎರಡು ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲೂ ಇವೆ. ರಾಮ ರಾವಣನನ್ನು ಸಂಹರಿಸಿದ ವಿಜಯ ಸಾಧಿಸಿದ ದಿನವೇ ವಿಜಯದಶಮಿ. ಇದರ ಜೊತೆಗೆ ಪಾಂಡವರು ತಮ್ಮ ಅಜ್ಞಾತ ವಾಸದಲ್ಲಿ ಯುದ್ಧದ ಶಸ್ತ್ರಾಸ್ತ್ರಗಳನ್ನು ಶಮೀ ವೃಕ್ಷದ ಮೇಲೆ

ಶವ ರೂಪದಲ್ಲಿ ಕಟ್ಟಿದ್ದರು ಎಂಬ ಐತಿಹ್ಯವಿದೆ. ತ್ರೇತಾಯುಗದಲ್ಲಿ ರಾಮ ದ್ವಾಪರಯುಗದಲ್ಲಿ ಪಾಂಡವರು ದುಷ್ಟರನ್ನು ಸಂಹರಿಸಿ ಧರ್ಮದ ಉಳಿವಿಗಾಗಿ ಹೋರಾಡಿದ ಹಿನ್ನೆಲೆಯಲ್ಲಿ ಮಹಾನವಮಿ ಮತ್ತು ವಿಜಯದಶಮಿಯನ್ನು ಆಚರಿಸಲಾಗುತ್ತದೆ. ಮಹಾನವಮಿಯ ಶಸ್ತ್ರಗಳನ್ನು ಪೂಜಿಸಿ ವಿಜಯದಶಮಿ ದಿನದಂದು ವಿಜಯವನ್ನು ಆಚರಿಸಿದರು ಎಂಬ ಪ್ರತೀತಿ ಇದೆ. ಈ ಹಿನ್ನೆಲೆಯಲ್ಲಿ ಮಹಾನವಮಿಯ ದಿನದಂದು ಶಮೀ ವೃಕ್ಷಕ್ಕೆ ಪೂಜಿಸಲಾಗುತ್ತದೆ. "ಶಮೇ ಶಮೆಯತೇ ಪಾಪಂ, ಶಮೇ ಶತ್ರು ನಿವಾರಣಂ. ಅರ್ಜುನಸ್ಯ ಧನುರ್ಧಾರೀ ರಾಮಸ್ಯ ಪ್ರಿಯದರ್ಶನಂ" ಎಂಬ ಶ್ಲೋಕವಿದೆ. ವಿಜಯದಶಮಿ ದಿನ ಕಿರಿಯರು ಹಿರಿಯರಿಗೆ ಶಮೀ ಪತ್ರೆಯನ್ನು ನೀಡಿ ಶ್ಲೋಕ ಹೇಳುತ್ತಾ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುವ ಪದ್ಧತಿಯಿದೆ.

ಗೊಂಬೆ ಹಬ್ಬ

ನವರಾತ್ರಿ, ದಸರೆಗೆ ಮತ್ತೊಂದು ಮುದ್ದಾದ ಹೆಸರೇ ಗೊಂಬೆ ಹಬ್ಬ. ದೇವಿಯು ರಾಕ್ಷಸರ ಸಂಹಾರ ಮಾಡುವಾಗ ಎಲ್ಲಾ ದೇವಾನುದೇವತೆಗಳು ತಮ್ಮೆಲ್ಲಾ ಶಸ್ತಾಸ್ತ್ರಗಳನ್ನು ದೇವಿಗೆ ನೀಡಿ ತಾವೆಲ್ಲ ಗೊಂಬೆಗಳಾಗಿ ಕುಳಿತಿದ್ದ ಕತೆಯ ಹಿನ್ನೆಲೆಯಲ್ಲಿ ನವರಾತ್ರಿಯಲ್ಲಿ ಗೊಂಬೆ ಇಡುವ ಸಂಪ್ರದಾಯವಿದೆ. ಇದೇ ಹಳೇ ಮೈಸೂರಿನಲ್ಲಿ ಸಂಪ್ರದಾಯವಾಗಿದೆ. ಗೊಂಬೆ ಕೂರಿಸುವುದು. ಗೊಂಬೆ ಹಬ್ಬ,ಮಕ್ಕಳ ಹಬ್ಬ ವಾಗಿದೆ.ಪಟ್ಟದ ಗೊಂಬೆಗಳು, ರಾಮಾಯಣ, ಮಹಾಭಾರತ, ಮೈಸೂರಿನ ದಸರೆ ಹೀಗೆ ಪೌರಾಣಿಕ ಮತ್ತು ಸಾಂಸ್ಕೃತಿಕ ಕತೆಗಳನ್ನು ಸಾರುವ ಗೊಂಬೆಗಳನ್ನು ಮನೆ ಮನೆಯಲ್ಲಿ ಕೂರಿಸಿ ಅಲಂಕರಿಸಲಾಗುತ್ತದೆ.

ಪಾರಾಯಣ, ಪಠಣ

ನವರಾತ್ರಿಯ ಸಂದರ್ಭದಲ್ಲಿ ದೇವಿ ಕುರಿತಾದ ಪುರಾಣ, ಶ್ಲೋಕ, ಕತೆ, ಸ್ತೋತ್ರಗಳನ್ನು ಪಠಿಸುವ ಪರಿಪಾಠವಿದೆ. ದಸರೆಯಲ್ಲಿ ಇವುಗಳನ್ನು ಪಾರಾಯಣ ಮಾಡುವುದು ಸೂಕ್ತ ಮತ್ತು ಶ್ರೇಷ್ಠ ಎಂಬ ನಂಬಿಕೆಯಿದೆ. ಒಂಭತ್ತು ದಿನಗಳ ಕಾಲ, ದೇವಿಯ ಲೀಲೆಗಳನ್ನು, ಅವತಾರಗಳನ್ನು ನಾನಾ ರೂಪದಲ್ಲಿ ಹಾಡುತ್ತಾರೆ. ದೇವಿ ಮಹಾತ್ಮೆ,ದುರ್ಗಾ ಸಪ್ತಶತೀ, ಲಲಿತಾ ಸಹಸ್ರನಾಮ, ಸೌಂದರ್ಯ ಲಹರಿ, ಹೀಗೆ ಅನೇಕ ದೇವಿ ಸಂಬಂಧಿತ ಸ್ತೋತ್ರಗಳನ್ನು ಪಠಿಸುವ ರೂಢಿಯಿದೆ.

ನವರಾತ್ರಿಯಲ್ಲಿ ದೇವಿಯ ಆರಾಧನೆ ವಿಶೇಷ. ಜ್ಞಾನ, ಬುದ್ಧಿ, ವಿದ್ಯೆ, ತಿಳಿವಳಿಕೆ, ಧೈರ್ಯ, ಶೌರ್ಯ ಗಳ ಸಂಕೇತವೇ ನವರಾತ್ರಿ. ಇಲ್ಲಿದೆ ಕಲೆಗೂ ಖಡ್ಗಕ್ಕೂ ಮೈತ್ರಿ. ಸಂಸ್ಕೃತಿಯ ಪ್ರತಿಬಿಂಬವಾದ ಈ ಹಬ್ಬದಲ್ಲಿ ವಿದ್ಯೆಯ ಅಧಿದೇವತೆಯಾರಿ ಸರಸ್ವತೀಯನ್ನು ಹಾಗೂ ಶಕ್ತಿ ದೇವತೆಯಾರಿ ದುರ್ಗೆಯನ್ನೂ ಪೂಜಿಸಲಾಗುತ್ತದೆ. ಈ ಹಬ್ಬದಲ್ಲಿ ದುಷ್ಟ ಶಿಕ್ಷಣ ಶಿಷ್ಟ ರಕ್ಷಣೆಗೆ ವಿದ್ಯೆ, ಬುದ್ಧಿ, ಶಸ್ತ್ರ,ಧೈರ್ಯ, ಶೌರ್ಯ ಮತ್ತು ಅಸ್ತ್ರಗಳೆಲ್ಲವೂ ಬೇಕು. ಅವೆಲ್ಲವುಗಳ ಬಲದಿಂದ ವಿಜಯಸಾಧಿಸಬಹುದು ಎಂಬ ಸಂದೇಶವಿದೆ.

ಸಾವಿನ ಭಯ ಬಿಟ್ಟು, ಬದುಕು ಮುಟ್ಟು!



ಮನುಷ್ಯನ ಮೆದುಳಿಗೆ ಅಪಾಯವನ್ನು ಮೊದಲೇ ಊಹಿಸುವ ಸಹಜ ಗುಣವಿದೆ. ಆದರೆ ನಿರಂತರವಾಗಿ ಅಂತ್ಯದ ಆತಂಕದಲ್ಲೇ ಬದುಕಿದರೆ, ಯೋಚನಾ ಶಕ್ತಿ ಮಂಕಾಗುತ್ತದೆ. ಮನೋವಿಜ್ಞಾನದಲ್ಲಿ ಇದನ್ನು 'ಭಯದ ಚಕ್ರ' ಎನ್ನುತ್ತಾರೆ. ಆತಂಕ ಹೆಚ್ಚಿದಂತೆ ದೇಹದ ರಕ್ಷಣಾ ವ್ಯವಸ್ಥೆ ಅನಗತ್ಯವಾಗಿ ಎಚ್ಚರಗೊಂಡು ಆಯಾಸ, ನಿದ್ರಾಭಂಗ ಮತ್ತು ಏಕಾಗ್ರತೆಯ ಕೊರತೆಯನ್ನು ತರುತ್ತದೆ.

ಜೀವನ ಅನಿಶ್ಚಿತ ಎಂಬುದನ್ನು ಒಪ್ಪಿಕೊಂಡಾಗಲೇ ಮನುಷ್ಯ ಪ್ರಬುದ್ಧನಾಗುತ್ತಾನೆ. ಪ್ರತಿದಿನವನ್ನು ಹೊಸ ಅವಕಾಶವೆ